

ಓದುವ ಅಭಿರುಚಿ ಬೆಳೆಸುವ

೭

# ಸಾಹಿತ್ಯ ಮಂಟಪ

ಇಲ್ಲಿನ ಕಥೆ, ಕವನಗಳನ್ನು
ನೀವೂ ಓದಿರಿ;
ಬೇರೆಯವರಿಗೂ ಓದಿ ಹೇಳಿರಿ.
'ಧ್ವನಿ' ಶೈಕ್ಷಣಿಕ ಯೋಜನೆಗಳ
ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಫೋಟೋ: ವಚನಶ್ರೀ ಹೊಂಬಳ, ಧ್ವನಿ ಬಳಗ

ನವೆಂಬರ್–ಡಿಸೆಂಬರ್ ೨೦೨೪–೨೫

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ಪೂರಣ ಯೋಜನೆ
Poorana 2024-25 Project
is Supported by Many
Individual Donors

# ಸದಾಶಯ

ಪ್ರೀತಿಯ ಮಕ್ಕಳೇ,

ಓದುವ ಅಭಿರುಚಿ ಹೆಚ್ಚಿಸಿಕೊಳ್ಳಲು ಪ್ರೇರಣೆ ನೀಡುವ 'ಸಾಹಿತ್ಯ ಮಂಟಪ' ನಿಮ್ಮ ಕೈಯಲ್ಲಿದೆ. ಇದರಲ್ಲಿ ಸ್ವರಚಿತ ಕಥೆ – ಕವನಗಳು, ಮೂಲ ಇಂಗ್ಲೀಷ್ ಕಥೆಯೊಂದಿಗೆ ಅದರ ಅನುವಾದ ಕೂಡ ಇವೆ.

ನಮ್ಮನಮ್ಮ ವ್ಯಕ್ತಿತ್ವವನ್ನು ಸುಂದರವಾಗಿ ಅರಳಿಸುವ ಶಕ್ತಿ ಹೊಂದಿರುವ ಸಾಹಿತ್ಯ ಮಂಟಪವು ನಿಮ್ಮಲ್ಲಿ ಹೊಸ ಆಲೋಚನೆಗಳಿಗೆ ದಾರಿದೀಪವಾಗಲಿ ಎಂಬುದು ನಮ್ಮ ಸದಾಶಯ.

ಪ್ರತಿ ಕಥೆಯ ಕೊನೆಗೆ ಆಕರಗಳನ್ನು ಕೊಡಲಾಗಿದೆ. ಶಿಕ್ಷಕರ ಸಹಾಯದಿಂದ ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಆ ಪುಸ್ತಕಗಳನ್ನು ತರಿಸಿಕೊಂಡು ಇನ್ನೂ ಹೆಚ್ಚು ಹೆಚ್ಚು ಓದಲು ಯತ್ನಿಸಿ.

ಸಾಹಿತ್ಯ ಮಂಟಪವನ್ನು ಸವಿದ ಬಳಿಕ ನಿಮ್ಮ ಅಭಿಪ್ರಾಯಗಳನ್ನು ಧ್ವನಿಯೊಂದಿಗೆ ಹಂಚಿಕೊಂಡರೆ ನಮಗೆಲ್ಲಾ ಸಂತಸವಾಗುತ್ತದೆ.

ಧನ್ಯವಾದಗಳೊಂದಿಗೆ...

– ಧ್ವನಿ ಬಳಗ

ಈ ಸಲದ

# ಸಾಹಿತ್ಯ ಮಂಟಪದಲ್ಲಿ


* ಪಾತಾಳದಿಂದೆದ್ದ ಪಿಶಾಚಿ
  – ಕೆ. ಪಿ. ಪೂರ್ಣಚಂದ್ರ ತೇಜಸ್ವಿ – ೪

* ಕಳ್ಳರ ಗುರು
  – ಡಾ. ಬೆಟಗೇರಿ ಕೃಷ್ಣಶರ್ಮ – ೨೩

* ಅಮೂಲ್ಯವಾದ ಕಲ್ಲು
  – ಅನು: ಶಿಹೊಂ – ೪೧

* The Precious Stone
  - www.linkedin.com – ೪೮

* ಹೊತ್ತಿತೋ ಹೊತ್ತಿತು ಕನ್ನಡದ ದೀಪ (ಕವನ)
  – ಡಾ.ಸಿದ್ದಯ್ಯ ಪುರಾಣಿಕ – ೫೪

# ಪಾತಾಳದಿಂದೆದ್ದ ಪಿಶಾಚಿ

**– ಕೆ. ಪಿ. ಪೂರ್ಣಚಂದ್ರ ತೇಜಸ್ವಿ**



ಬೆಳ್ಳಂದೂರು ಒಂದು ಗುಡ್ಡದ ತಪ್ಪಲಿನಲ್ಲಿ, ತ್ಯಾಗರ್ಥಿ ಎನ್ನುವ ಚಿಕ್ಕ ಊರಿನಿಂದ ಸುಮಾರು ಮೂರು ಮೈಲು ದೂರದಲ್ಲಿರುವ, ಮೈಸೂರು ಸಂಸ್ಥಾನದ ಶಿವಮೊಗ್ಗಾ ಜಿಲ್ಲೆಯ ಒಂದು ಚಿಕ್ಕ ಹಳ್ಳಿ.

ಅನೇಕ ಶತಮಾನಗಳಿಂದ ಮೈಸೂರು ಸಂಸ್ಥಾನದ ಈ ಜಿಲ್ಲೆ ಭಯಾನಕ ಹುಲಿಗಳ ತವರುಮನೆ ಎಂದು ಹೆಸರುವಾಸಿಯಾಗಿತ್ತು. ಇಲ್ಲಿನ ಕಾಡುಗಳಲ್ಲಿ ಹುಲಿಗಳು ಎಷ್ಟೊಂದು ಅಗಣಿತವಾಗಿದ್ದುವೆಂದರೆ ಇದರಿಂದಾಗಿಯೇ ಇಲ್ಲಿ ಚಿರತೆಗಳು ತುಂಬಾ ಕಡಿಮೆಯಾಗಿದ್ದುವು. ಬಹುಶಃ ಈ ಹುಲಿಗಳು ಚಿರತೆಗಳನ್ನು ಹಿಡಿದು ಕೊಂದೋ ತಿಂದೋ ಖಾಲಿ ಮಾಡಿದ್ದುವೆಂದು ನನಗೆ ತೋರುತ್ತದೆ. ಚಿರತೆಗಳು ಹುಲಿಗಳಿಗಿಂತ ಹೆಚ್ಚು ಕುತಂತ್ರಿಗಳು, ಅಪಾರ ಬುದ್ದಿಯುಳ್ಳವು. ಚಿರತೆಗಳು ಪೊದೆಗಳೆಡೆಯಲ್ಲಿ ಅಡಗಿ ಕುಳಿತು ಊರಿನ ಜನಗಳ ಕುರಿ, ಮೇಕೆ, ನಾಯಿಗಳನ್ನು, ಮುಖ್ಯವಾಗಿ ನಾಯಿಗಳನ್ನು ಮಿಂಚಿನ ವೇಗದಲ್ಲಿ ಹಿಡಿದು ಹೊತ್ತೊಯ್ಯುವುದರಲ್ಲಿ ಅವು ತೋರಿಸುವ ಕೌಶಲ್ಯ ಹುಲಿಗಳಿಗೆ ಎಂದೂ ಬರುವುದಿಲ್ಲ. ಆದರೆ ಹುಲಿಗಳ ಸಂಖ್ಯಾ ಬಾಹುಳ್ಯದಿಂದ ಇಲ್ಲಿ ಚಿರತೆಗಳು ಕ್ಷೀಣಿಸಿದ್ದುವು.

ಸಾಮಾನ್ಯವಾಗಿ ಚಿರತೆಗಳು

ಮನುಷ್ಯರ ತಂಟೆಗೆ ಬರುವುದಿಲ್ಲ. ಆದರೆ ಒಮ್ಮೊಮ್ಮೆ ದುರ್ದೈವವಶಾತ್ ಇವು ನರಮಾಂಸದ ರುಚಿ ಹಿಡಿದು ನರಭಕ್ಷಕಗಳಾದರೆ ಇವುಗಳ ಬುದ್ಧಿವಂತಿಕೆ ಮತ್ತು ಕುತಂತ್ರದ ದೆಸೆಯಿಂದ ಶಿಕಾರಿ ಮಾಡಿ ಸಂಹರಿಸುವುದು ತುಂಬಾ ಕಷ್ಟವಾಗುತ್ತದೆ. ಅದೂ ಮಲೆನಾಡಿನ ಬೆಳ್ಳಂದೂರಿನ ಸುತ್ತ ಇರುವ ದಟ್ಟಡವಿಗಳಲ್ಲಂತೂ ಕಡುಕಷ್ಟವೆನ್ನಬಹುದು.

ನನ್ನ ಕತೆ ಪ್ರಾರಂಭವಾಗುವುದಕ್ಕೆ ಮೊದಲೇ ಈ ಕಾಡುಗಳಲ್ಲಿ ಹುಲಿಯ ಆಳ್ವಿಕೆ ಪ್ರಾರಂಭವಾಗಿ ಚಿರತೆಗಳು ಅವನತಿಯ ಹಾದಿ ಹಿಡಿದಿದ್ದುವು.

ಬೆಳ್ಳಂದೂರಿನಲ್ಲಿ ಒಬ್ಬ ಮಂತ್ರವಾದಿ ಇದ್ದ. ಅವನು ಎಲ್ಲದಕ್ಕೂ ಮಂತ್ರ ಮಾಡುತ್ತಿದ್ದ. ಮಂತ್ರಹಾಕಿ ಕಾಯಿಲೆ ಕಸಾಲೆಗಳನ್ನು ಗುಣಪಡಿಸುವುದು, ಒಲ್ಲದ ಗಂಡರಿಗೆ ಮಂತ್ರ ಹಾಕಿ ಅವರು ಹೆಂಡರಿಗೆ ಪುನಃ ವಶವಾಗುವಂತೆ ಮಾಡುವುದು, ಬೆಳೆಗಳಿಗೆ ಬರುವ ಕ್ರಿಮಿ

ಕೀಟಗಳಿಗೆ ಮಂತ್ರ ಹಾಕಿ ನಿವಾರಿಸುವುದು, ಮಂತ್ರ ಮಾಡಿ ಕೋರ್ಟಿನಲ್ಲಿ ಕೆಸು ಗೆಲ್ಲುವಂತೆ ಮಾಡುವುದು, ಹೀಗೇ ಇವನ ಬಳಿ ಎಲ್ಲಕ್ಕೂ ಏನಾದರೂ ಒಂದು ಮಂತ್ರವೋ ತಿರುಮಂತ್ರವೋ ಇರುತ್ತಿತ್ತು.

ಇಷ್ಟಲ್ಲದೆ ಇವನಿಗೆ ಕಾಡಿನ ಶಕ್ತಿಗಳ ಮೇಲೂ ಪ್ರಭಾವ ಬೀರುವ ಮಂತ್ರಗಳು ಗೊತ್ತಿದ್ದುವೆಂದು ಜನಗಳು ನಂಬಿದ್ದರು. ಅವನು ಮಂತ್ರ ಹಾಕಿ ಕಟ್ಟು ಮಾಡಿದರೆ ಸಾಕು ಯಾವ ಶಿಕಾರಿದಾರರು ಆ ಕಾಡಿನಲ್ಲಿ ಎಷ್ಟು ತಿರುಗಿದರೂ ಅವರ ಕಣ್ಣಿಗೆ ಒಂದೇ ಒಂದು ಪ್ರಾಣಿಯೂ ಬೀಳುತ್ತಿರಲಿಲ್ಲ. ಅಥವಾ ಅವರ ಬಂದೂಕಿನ ನೇರಕ್ಕೆ ಒಂದೇ ಒಂದು ಪ್ರಾಣಿಯೂ ಪ್ರತ್ಯಕ್ಷವಾಗುತ್ತಿರಲಿಲ್ಲ. ಅಥವಾ ಅಕಸ್ಮಾತ್ ಬಂದರೂ ಅವರ ಕೋವಿ ಸಿಡಿಯುತ್ತಲೇ ಇರಲಿಲ್ಲ. ಅಥವಾ ಕೋವಿ ಸಿಡಿದರೂ ಗುಂಡು ಗುರಿ ಮುಟ್ಟುತ್ತಲೇ ಇರಲಿಲ್ಲ. ಈ ರೀತಿಯ ಅಸಮಾನ್ಯ ಮಂತ್ರವಾದಿ ಇವನೆಂದು

ಹಳ್ಳಿಗಳಲ್ಲೆಲ್ಲಾ ಪ್ರಸಿದ್ಧನಾಗಿದ್ದ. ನಾನು ಹಿಂದೆ ಅನೇಕಬಾರಿ ಇವನನ್ನು ಸಂಧಿಸಿದ್ದೆ. ಇವನಿಗೆ ಹೊಗಳಿಕೆ ಎಂದರೆ ಪಂಚಪ್ರಾಣ. ಎಷ್ಟಾದರೂ ಇವನೂ ಸಹ ನಮ್ಮಂತೆಯೇ ಅನ್ನ ತಿನ್ನುವ ನರಮನುಷ್ಯ ನಲ್ಲವೆ! ಇದೊಂದನ್ನು ಬಿಟ್ಟರೆ ಇವನೇನೂ ಅಂಥ ಅಪಾಯಕಾರಿಯಾದ ಕೇಡಿಗನಾಗಿರಲಿಲ್ಲ. ಈ ಮಹಾನುಭಾವನ ಸನ್ನಿಧಿಯಲ್ಲೇ ಬೆಳ್ಳಂದೂರಿನ ಭಯಾನಕ ನರಭಕ್ಷಕ ರೂಪುಗೊಂಡಿದ್ದು.

ಈ ನರಭಕ್ಷಕನೂ ಕಾಡಿನ ಎಲ್ಲ ಸರಳ ಸರ್ವಸಾಧಾರಣ ಹುಲಿಯಂತೆಯೇ ತನ್ನ ಜೀವನ ಪ್ರಾರಂಭಿಸಿತು. ಅದು ಚಿಕ್ಕದಿದ್ದಾಗ ಅದರ ಕಾಟ ತೊಂದರೆಗಳೇನೂ ಯಾರ ಕಿವಿಗೂ ಬಿದ್ದಿರಲಿಲ್ಲ. ಆ ಕಾಡಿನಲ್ಲಿ ಬೇಕಾದಂತೆ ಇದ್ದ ಜಿಂಕೆ, ಮೊಲ, ಬರ್ಕ, ಹಂದಿ ಇತ್ಯಾದಿಗಳಿಗೆ ಮಾತ್ರ ಇದರ ಶಿಕಾರಿ ಸೀಮಿತವಾಗಿತ್ತೆಂದು ಕಾಣುತ್ತದೆ. ಆ ಕಾಡಿನಲ್ಲಿ ಹುಲ್ಲು ಯಥೇಚ್ಛವಾಗಿ ಬೆಳೆಯುತ್ತಿದ್ದುದರಿಂದ

ಸಸ್ಯಾಹಾರಿ ಕಾಡುಪ್ರಾಣಿಗಳು ಬೇಕಾದಂತೆ ವೃದ್ಧಿಯಾಗಿದ್ದುವು. ಆದರೆ ಕಾಲಾಂತರದಲ್ಲಿ ಸರ್ಕಾರ ಹಳ್ಳಿಗರಿಗೆ ದನ ಎಮ್ಮೆಗಳನ್ನು ಸಾಕಲು ಪ್ರೋತ್ಸಾಹ ಕೊಟ್ಟಿತು. ಅದಕ್ಕೆ ಸುತ್ತೆಲ್ಲಾ ಕಾಡುಗಳಲ್ಲಿ ಯಥೇಚ್ಛವಾಗಿದ್ದ ಹುಲ್ಲೇ ಕಾರಣ. ದನಗಳನ್ನು ಮೇಯಿಸಲು ಅವಕಾಶ ಕೊಟ್ಟಕೂಡಲೇ ಅವುಗಳ ಸಂಖ್ಯೆಯೂ ಅಗಣಿತವಾಗಿ ವೃದ್ಧಿಯಾಗತೊಡಗಿತು. ಹಿಂದೆ ಕಾಡುಕುರಿ ಜಿಂಕೆ ಹಂದಿ ಮೊಲ ಮೊದಲಾದುವು ಮೇದುಕೊಂಡಿದ್ದ ಜಾಗಗಳನ್ನೆಲ್ಲಾ ಈ ಸಾಕು ಪ್ರಾಣಿಗಳು ಆಕ್ರಮಿಸಿದುವು. ಬೆಳ್ಳಂದೂರಿನ ನರಭಕ್ಷಕ ಕಾಡುಪ್ರಾಣಿಗಳ ಆಹಾರದಿಂದ ಊರು ಪ್ರಾಣಿಗಳ ಆಹಾರಕ್ಕೆ ತನ್ನ ರುಚಿ ಬದಲಿಸಿಕೊಳ್ಳಬೇಕಾಗಿ ಬಂತು. ಅದು ಊರಿನ ದನ ಕರುಗಳನ್ನು ಹಿಡಿದು ತಿನ್ನಲು ಶುರು ಮಾಡಿದ ಕೂಡಲೇ ಅದರ ಅಸ್ಥಿತ್ವ ಊರಿನ ಜನಗಳ ಗಮನಕ್ಕೆ ಬಂತು. ಆ ಹುಲಿಯ ನೂತನ ಅಭಿರುಚಿ ಎಷ್ಟು ವೇಗವಾಗಿ

ವೃದ್ಧಿಯಾಯ್ತೆಂದರೆ ಅದು ಕೆಲವೇ ಕಾಲದಲ್ಲಿ ಕಾಡಿನ ಆಹಾರದ ಬಗ್ಗೆ ಆಸಕ್ತಿಯನ್ನೇ ಕಳೆದುಕೊಂಡು ಸಾಕುಪ್ರಾಣಿಗಳನ್ನೇ ಅವಲಂಬಿಸಿತು. ಅದು ದನಗಳನ್ನು ಒಂದೇಸಮ ಕೊಂದೂ ತಿಂದೂ ಕೊಂದೂ ತಿಂದೂ ಕೊನೆಗೆ ಹಳ್ಳಿಗರು ಈ ಉಪದ್ರಮಾರಿಯ ಕಾಟ ತಾಳಲಾರದೆ ಏನಾದರೂ ಮಾಡಲೇಬೇಕೆಂಬ ತಿರ್ಮಾನಕ್ಕೆ ಬಂದರು.

ಭಾರತದ ಹಳ್ಳಿಗರಿದ್ದಾರಲ್ಲಾ! ಅವರ ತಾಳ್ಮೆಗೆ ಕೊನೆಮೊದಲೆಂಬುದೇ ಇಲ್ಲ. ತಮ್ಮ ತೊಂದರೆ ಕಷ್ಟಗಳನ್ನೆಲ್ಲಾ ತಮ್ಮ ಕರ್ಮಗಳೆಂದೋ ಅಥವಾ ತಮಗೆ ದೇವರು ಕೊಡುತ್ತಿರುವ ಶಿಕ್ಷೆ ಎಂದೋ ಭಾವಿಸಿ ಸುಮ್ಮನೆ ತಲೆ ಬಗ್ಗಿಸಿಕೊಂಡು ಅನುಭವಿಸುತ್ತಾ ಸಹಿಸುತ್ತಾರೆ. ಆದ್ದರಿಂದ ಹಳ್ಳಿಗರು ಆ ಮಾರಿಗೆ ಏನಾದರೂ ಮಾಡಬೇಕೆಂದು ತೀರ್ಮಾನಿಸಿದಾಗ ಹುಲಿ ಅವರಿಗೆ ಯಾವ ಮಟ್ಟದ ಉಪದ್ರವ ಕೊಟ್ಟಿರಬಹುದೆಂದು ನೀವೇ

ಊಹಿಸಿರಿ. ಈ ಹುಲಿಯನ್ನು ಏನಾದರೂ ಮಾಡಿ ಬಲಿ ಹಾಕಬೇಕೆಂದು ಬೆಳ್ಳಂದೂರಿನ ಹಳ್ಳಿಗರೆಲ್ಲಾ ದೃಢನಿಶ್ಚಯ ಮಾಡಿ ಸಭೆ ಸೇರಿದರು.

ಅವರು ಪ್ರಾಣಿಗಳು ಓಡಾಡುವ ದಾರಿಯಲ್ಲಿ ಒಂದು ಚಚೌಕ ಬಾವಿ ತೋಡಿದರು. ಅದರ ಮೇಲೆ ತೆಳ್ಳನೆಯ ಬಿದಿರು ತಡಿಕೆಯೊಂದನ್ನು ಮುಚ್ಚಿ, ಅದರ ಮೇಲೆಲ್ಲಾ ಹುಲ್ಲು ತರಗೆಲೆಗಳನ್ನು ಹರಡಿ ಸ್ವಾಭಾವಿಕ ನೆಲದಂತೆಯೇ ಕಾಣುವಂತೆ ಮಾಡಿದರು. ಆ ಬಾವಿಯ ಒಂದುಕಡೆ ಬಡಕಲು ದನ ಒಂದನ್ನು ಕಟ್ಟಿ, ದನದ ಹತ್ತಿರಕ್ಕೆ ಹುಲಿ ಬೇರೆ ಯಾವ ದಿಕ್ಕಿನಿಂದಲೂ ಸಮೀಪಿಸದಂತೆ ಅಭೇದ್ಯವಾದ ಮುಳ್ಳು ಬೇಲಿಯನ್ನು ಅಡಕಿದರು. ಹುಲಿ ದನ ಹಿಡಿಯಲು ಬಂದರೆ ಅದು ಅವರು ತೋಡಿ ಮುಚ್ಚಿದ್ದ ಬಾವಿ ಮಾರ್ಗವಾಗೇ ಬರಬೇಕಿತ್ತು.

ಎಲ್ಲವೂ ಹಳ್ಳಿಗರ ಉಪಾಯದ

ಪ್ರಕಾರವೇ ನಡೆಯಿತು. ಅವರ ಗುಂಡಿ ತೋಡಿದ ಮಾರನೆ ದಿನ ಕಾಡಿನೊಳಗೆ ವಾರಸುದಾರರಿಲ್ಲದೆ ನಿಂತಿದ್ದ ದನ ನೋಡಿ ಹುಲಿ ಆ ಮಾರ್ಗವಾಗೇ ದನ ಹಿಡಿಯಲು ನಡೆದು ಬಂತು. ಅವರು ತೋಡಿದ್ದ ಬಾವಿಯೊಳಗೆ ದೊಪ್ಪನೆ ಬಿತ್ತು.

ಮಾರನೆದಿನ ಹಳ್ಳಿಗರಿಗೆ ಇದು ಗೊತ್ತಾದಾಗ ಎಲ್ಲರೂ ಕುಣಿದಾಡಿದರು. ಮತ್ತೊಂದು ಸಭೆ ಕರೆದು ಮಂತ್ರವಾದಿಯೊಡನೆ ಮುಂದೇನು ಮಾಡಬೇಕೆಂದು ಸಮಾಲೋಚನೆ ಮಾಡಿದರು. ಮುಂದೇನೆಂಬುದೇ ಅವರ ಚಿಂತೆಯಾಗಿತ್ತು. ಕೆಲವರು ಹುಲ್ಲು ಕಂತೆಗಳಿಗೆ ಬೆಂಕಿ ಹಚ್ಚಿ ಆ ಬಾವಿಯೊಳಗೆ ಎಸೆದುಬಿಡೋಣ, ಆ ರಾಕ್ಷಸ ಇಲ್ಲಿಯವರೆಗೆ ನಮಗೆ ಮಾಡಿದ ನಷ್ಟಕ್ಕೆ ಜೀವಂತವಾಗಿ ಸುಡುವುದೇ ಸರಿಯಾದ ಶಿಕ್ಷೆ ಎಂದು ಹೇಳಿದರು. ಆ ಊರಿನಲ್ಲಿ ಯಾರಬಳಿಯೂ ಬಂದೂಕಿರಲಿಲ್ಲ. ಆದ್ದರಿಂದ ಅವರಿಗೆ ಕೋವಿಯಲ್ಲಿ ಹೊಡೆದು ಕೊಲ್ಲಬಹುದೆಂಬ

ಯೋಚನೆಯೇ ಬರಲಿಲ್ಲ. ಕೊನೆಗೆ ಅದನ್ನು ಮೇಲಿನಿಂದ ಭರ್ಜಿಗಳಿಂದ ಚುಚ್ಚಿಚುಚ್ಚಿ ಚಿತ್ರಹಿಂಸೆ ಕೊಟ್ಟು ಕೊಲ್ಲಬೇಕೆಂದು ತೀರ್ಮಾನಿಸಿದರು. ಅವರಿಗೆ ಆ ಹುಲಿಯ ಬಗ್ಗೆ ಅಷ್ಟೊಂದು ಸಿಟ್ಟಿತ್ತು.

ಬೆಳ್ಳಂದೂರಿನಲ್ಲಿ ಯಾರಬಳಿಯಾದರೂ ಕೋವಿ ಇರಲಿ ಒಳ್ಳೆ ಭರ್ಜಿ ಈಟಿಗಳಾದರೂ ಇದ್ದುವ? ಇಬ್ಬರ ಬಳಿ ಭರ್ಜಿ ಎಂದು ಕರೆಯಬಹುದಾದ ಆಯುಧಗಳೇನೋ ಇದ್ದುವು. ಆದರೆ ಅವುಗಳ ಮೂತಿ ಎಷ್ಟೊಂದು ಮೊಂಡಾಗಿತ್ತೆಂದರೆ ಅವುಗಳ ಮುಂಭಾಗಗಳು ಹಿಂಭಾಗಗಳಷ್ಟೇ ನಿರಪಾಯಕಾರಿಗಳಾಗಿದ್ದುವು. ಒಂದು ಸುಮಾರು ನಾಲ್ಕು ಅಡಿ ಉದ್ದ ಇದ್ದು ಅದರ ಮುಂಭಾಗ ಯಾವದೆಂದು ಇಷ್ಟಬಂದವರು ಇಷ್ಟ ಬಂದಂತೆ ನಿರ್ಧರಿಸಿ ಕೆಲಸ ಮಾಡಬಹುದಿತ್ತು. ಅದರ ಯಜಮಾನ ಅದನ್ನು ಮಣ್ಣು ಅಗೆಯಲು ಸಹ ಉಪಯೋಗಿಸುತ್ತಿದ್ದನೆಂದು ತೋರುತ್ತದೆ.

ಇನ್ನೊಂದು ಊರಿನ ದೇವಸ್ಥಾನದಲ್ಲಿ ಇಟ್ಟಿದ್ದ ಭರ್ಜಿ, ಸುಮೂರು ಇನ್ನೂರು ವರ್ಷಗಳ ಹಿಂದೆ ಹಲವು ಯುದ್ಧಗಳಲ್ಲಿ ಭಾಗವಹಿಸಿದ್ದ ಅದು ಶತ್ರುಗಳ ರುಂಡ ಚೆಂಡಾಡಿದ್ದೆಂದು ಮಂತ್ರವಾದಿ ಅದರ ಮಹಿಮೆಯನ್ನು ವಿವರಿಸುತ್ತಿದ್ದ. ಆದರೆ ಅದರ ಸ್ಥಿತಿ ಸಹ ಇನ್ನೊಂದು ಭರ್ಜಿಗಿಂತ ಯಾವ ರೀತಿಯಲ್ಲೂ ಮೇಲಾಗಿರಲಿಲ್ಲ. ಅವೆರಡೂ ನಾಲ್ಕಡಿ ಉದ್ದ ಇದ್ದುದರಿಂದ ಅವನ್ನು ಕೈಯ್ಯಲ್ಲಿ ಹಿಡಿದೇ ಬಾವಿಯ ಆಳದಲ್ಲಿ ಬಿದ್ದಿದ್ದ ಹುಲಿಗೆ ಚುಚ್ಚಿ ಚಿತ್ರಹಿಂಸೆ ಕೊಡುವುದು ಸಾಧ್ಯವಿರಲಿಲ್ಲ. ಆದರೂ ಅವುಗಳ ಯಜಮಾನರು ಮೇಲಿನಿಂದ ಇವನ್ನು ಹುಲಿಯತ್ತ ಎಸೆದರೆ ಸಾಕು ಹುಲಿ ಒಂದೇ ಹೊಡೆತಕ್ಕೆ ವಿಲಿವಿಲಿ ಒದ್ದಾಡಿ ಪ್ರಾಣ ಬಿಡುತ್ತದೆಂದು ಬಡಾಯಿ ಕೊಚ್ಚಿದರು.

ಆಮೇಲೆ ಯಾರು ಈ ಮೊಂಡಾಗಿದ್ದ ಭರ್ಜಿಬ್ರಹ್ಮಾಸ್ತ್ರಗಳನ್ನು ಮೊದಲು ಹುಲಿಯ ಮೇಲೆ ಪ್ರಯೋಗಿಸಬೇಕೆಂಬುದಕ್ಕೆ ವಾದ

ವಿವಾದಗಳು ಶುರುವಾಗಿ ದೇವಸ್ಥಾನದ ಭರ್ಜಿಯವನಿಗೆ ಎರಡನೇ ಸ್ಥಾನ ಸಿಕ್ಕಿತು. ಎಲ್ಲರೂ ಗುಂಪು ಕೂಡಿಕೊಂಡು ಹುಲಿ ಬಿದ್ದಿದ್ದ ಗುಂಡಿ ಬಳಿಗೆ ಹೋದರು. ಮೊದಲನೆಯವನು ಬಾವಿಯ ಅಂಚಿನಲ್ಲಿ ನಿಂತು ತಳದಲ್ಲಿದ್ದ ಹುಲಿಗೆ ಗುರಿ ನೋಡಿ ಬಲವೆಲ್ಲಾ ಬಿಟ್ಟು ಭರ್ಜಿ ಎಸೆದ. ಅದು ನೇರವಾಗಿ ಬಾವಿ ಗೋಡೆಗೆ ಢಿಕ್ಕಿ ಹೊಡೆದು ತಲೆಕೆಳಗಾಗಿ ಹುಲಿ ಮೇಲೆ ಬಿತ್ತು. ಅದರೊಡನೆ ಬಾವಿಯ ಮಣ್ಣು ಗೋಡೆಯ ಕಲ್ಲೂ ಧೂಳೂ ಅದರ ಮೇಲೆ ಬಿತ್ತು. ಹುಲಿ ಇವರ ಹುಡುಗಾಟ ಚೇಷ್ಟೆಗಳನ್ನು ಹಗುರವಾಗಿ ಪರಿಗಣಿಸುವ ಸ್ಥಿತಿಯಲ್ಲಿರಲಿಲ್ಲ. ಒಂದುಸಾರಿ ಘರ್ಜಿಸಿ ಕೆಂಗಣ್ಣು ಬಿಟ್ಟು ಬಾವಿಯ ಮೇಲೆ ನಿಂತು ಚಿತ್ರಹಿಂಸೆ ಕೊಡಲು ಪ್ರಯತ್ನಿಸುತ್ತಿದ್ದ ಹಳ್ಳಿಗರ ಕಡೆ ನೋಡಿತು.

ಇನ್ನೊಬ್ಬ ಭರ್ಜಿಯವನು ತನ್ನ ಹತಾರನ್ನು ಸಿದ್ಧ ಮಾಡಿಕೊಳ್ಳುತ್ತಿರಬೇಕಾದರೆ ಹಳ್ಳಿಯವರ ಗುಂಪಿನಲ್ಲಿ ಆಗಲೇ ಗಾಬರಿ

ಗುಜುಗುಜು ಮಾತು ಶುರುವಾಗಿತ್ತು. ದೇವಸ್ಥಾನದ ಭರ್ಜಿಯವ ಮೊದಲಿನವನು ತಿರಸ್ಕಾರದ ನೋಟ ಬೀರುತ್ತ ತನ್ನ ಇನ್ನೂರೈವತ್ತು ವರ್ಷ ಹಿಂದಿನ ಪ್ರಚಂಡ ಪರಾಕ್ರಮದ ಭರ್ಜಿಯನ್ನು ಮೇಲೆತ್ತಿ ಬಲವೆಲ್ಲಾ ಬಿಟ್ಟು ಹುಲಿಯಕಡೆಗೆ ಪ್ರಯೋಗಿಸಿದ. ಅವನು ಎಸೆದ ಜೋರಿಗೆ ಈಟಿ ನೇರವಾಗಿ ಹೋಗಿ ಹುಲಿಯ ಹಿಂತೊಡೆಗೆ ಚುಚ್ಚಿ ಗಾಯ ಮಾಡಿ ಪಕ್ಕಕ್ಕೆ ಬಿತ್ತು.

ಈಗ ಬೆಳ್ಳಂದೂರಿನ ಪರಾಕ್ರಮಿಗಳ ಬಳಿ ಒಂದೇ ಒಂದು ಆಯುಧವೂ ಇರಲಿಲ್ಲ! ಇದ್ದ ಎರಡು ಈಟಿಗಳನ್ನೂ ಬಾವಿಯೊಳಗೆ ಎಸೆದಾಗಿದೆ!

ಹುಲಿ ಸಂಪೂರ್ಣ ತಾಳ್ಮೆ ಕಳೆದುಕೊಂಡಿತು. ಕೋಪದ ಭರದಲ್ಲಿ ತನ್ನಲ್ಲಿದ್ದ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ ಭಯಂಕರ ಘರ್ಜನೆಯೊಂದಿಗೆ ಬಾವಿಯ ತಳದಿಂದ ಮೇಲಕ್ಕೆ, ನಿಂತಲ್ಲಿಂದಲೇ ಚಂಗನೆ ಚಿಮ್ಮಿತು.

ಅದರ ಮುಂಗಾಲುಗಳು ಬಾವಿಯ ಮೇಲಿನ ಹುಲ್ಲಿನ ನೆಲವನ್ನು ಹಿಡಿದುಕೊಂಡುವು. ಹಿಂಗಾಲುಗಳಿಂದ ಬಾವಿಯ ಗೋಡೆಯನ್ನು ಬಲವಾಗಿ ಕೆರೆದುದರಿಂದ ಹಿಡಿತ ಸಿಕ್ಕಿತು. ಮರಕ್ಷಣ ಪಾತಾಳದಿಂದ ಮೇಲೆ ಬಂದ ಪಿಶಾಚಿಯಂತೆ ಹುಲಿ ಬಾವಿಯ ಮೇಲೆ ನಿಂತಿತ್ತು!

ಹಳ್ಳಿಗರಿಗೆಲ್ಲಾ ಹುಲಿಗೆ ಕೊಡಬೇಕೆಂದಿದ್ದ ಚಿತ್ರಹಿಂಸೆ ಮರೆತೇಹೋಯ್ತು. ಭರ್ಜಿ ಎಸೆದವರಿಗೆ ಬಾಯಿಗೆ ಬಂದಂತೆ ಬಯ್ಯುತ್ತಾ ದಿಕ್ಕಾಪಾಲಾಗಿ ಓಡತೊಡಗಿದರು. ಹುಲಿ ಕಾಡಿನ ಕಡೆಗೆ ಓಡಬೇಕಾದರೆ ಅದೇ ದಾರಿಯಲ್ಲಿ ಪ್ರಾಣ ಉಳಿಸಿಕೊಳ್ಳಲು ಓಡುತ್ತಿದ್ದವನೊಬ್ಬ ಅಡ್ಡ ಸಿಕ್ಕಿದ. ಹುಲಿ ಅವನ ಮೇಲೆ ಜಿಗಿದು ಅಪ್ಪಳಿಸಿತು. ಅದರ ಮುಂಗಾಲು ಬೀಸಿದ ವೇಗಕ್ಕೆ ಅವನ ತಲೆಯ ಚರ್ಮ ಸುಲಿದು ಮುಂದಕ್ಕೆ ಬಂದು ಮುಖವಾಡದಂತೆ ಕವಿದು ಅವನಿಗೆ ದಾರಿ

ಕಾಣದಾಯ್ತು. ಹುಲಿ ಕಾಡಿಗೆ ಓಡಿಹೋಗುವ ಭರದಲ್ಲಿ ಇವನತ್ತ ಕಾಲು ಬೀಸಿದ್ದಷ್ಟೆ. ಅದು ಸರಿಯಾಗಿ ಮುಂಗಾಲಿನಿಂದ ಹೊಡೆದಿದ್ದರೆ ಇವನ ತಲೆ ಕೋಳಿಮೊಟ್ಟೆಯಂತೆ ಅಪ್ಪಚ್ಚಿಯಾಗುತ್ತಿತ್ತು.

ಹುಲಿ ಮಿಂಚಿನಂತೆ ಕಾಡಿನ ಸ್ವಾತಂತ್ರ್ಯದ ಕಡೆಗೆ ಪಲಾಯನ ಮಾಡಿತು. ತಲೆಯ ಚರ್ಮ ಟೋಪಿಯಂತೆ ಸುಲಿದು ಬಂದಿದ್ದವ ಅದೊಂದನ್ನು ಬಿಟ್ಟರೆ ಮತ್ತೇನೂ ಆಗದವನಹಾಗೆ ಚೆನ್ನಾಗಿಯೇ ಕಾಣುತ್ತಿದ್ದ. ಅವನ ತಲೆಯ ಚರ್ಮ ಕೂದಲು ಸಮೇತ ಕಪಾಲದ ಹತ್ತಿರ ಅಂಟಿಕೊಂಡು ಜೋತಾಡುತ್ತಿತ್ತು. ರಕ್ತ ಧಾರಾಕಾರವಾಗಿ ಇಳಿಯುತ್ತಿದ್ದ ಅವನು ಮೂರುದಿನ ನರಕಯಾತನೆ ಅನುಭವಿಸಿ ಸತ್ತ. ಸಾಯುವ ಕೊನೆಯ ಘಳಿಗೆಯವರೆಗೂ ತನ್ನ ಸುಲಿದುಹೋದ ತಲೆ ಚರ್ಮವನ್ನು ಮತ್ತೆ ಕೂರಿಸಲು ಪ್ರಯತ್ನಿಸುತ್ತಿದ್ದನಂತೆ. ಹುಲಿಗೆ

ಕೊಡಬೇಕೆಂದಿದ್ದ ಚಿತ್ರಹಿಂಸೆಯೆಲ್ಲಾ ಇವನಿಗೇ ಆಯಿತು. ಬೆಳ್ಳಂದೂರಿನ ನರಭಕ್ಷಕ ತೆಗೆದುಕೊಂಡ ಮೊದಲ ನರಬಲಿ ಇದು. ಆದರೆ ಇದು ಉದ್ದೇಶಪೂರ್ವಕ ನರ ಬಲಿಯಲ್ಲ.

ಹುಲಿ ಕಾಡಿಗೆ ಓಡಿಹೋಯ್ತು. ಅದರ ತೊಡೆಯ ಹಿಂಭಾಗದಲ್ಲಿ ದೇವಸ್ಥಾನದ ಈಟಿ ತಾಗಿ ಆದ ಗಾಯ ಅದರ ಗಮನಕ್ಕೂ ಸಹ ಬರದೆ ವಾಸಿಯಾಯ್ತು. ಆದರೆ ಈ ಘಟನೆಯ ಅನಂತರ ಅದರ ಬುದ್ಧಿಶಕ್ತಿ ಅಪಾರವಾಗಿ ವೃದ್ಧಿಸಿತು. ಅದರ ಕುಯುಕ್ತಿ ಕಪಟಗಳು ಹೆಚ್ಚಾದುವು. ಆಮೇಲೆ ಹಳ್ಳಿಯವರು ಅದನ್ನು ಹಿಡಿಯಲು ಮಾಡಿದ ಯಾವ ತಂತ್ರಕ್ಕೂ ಅದು ಸಿಕ್ಕಿಕೊಳ್ಳಲೇ ಇಲ್ಲ. ಅಲ್ಲಿಯವರೆಗೂ ಕಳ್ಳತನದಲ್ಲಿ ದನ ಎಮ್ಮೆಗಳನ್ನು ಹಿಡಿದು ಹೊರುತ್ತಿದ್ದ ಅದು ಅನಂತರ ರಾಜಾರೋಷಾಗಿ ಹಾಡುಹಗಲಿನಲ್ಲೇ ದನಗಾಹಿಗಳ ಸಮ್ಮುಖ ದಲ್ಲೇ ಬಂದು ದನ ಹಿಡಿದು ಒಯ್ಯಲು ಶುರುಮಾಡಿತು. ಮಧ್ಯಾಹ್ನದ ಹೊತ್ತಿನಲ್ಲಿ

ಮೇಯ್ದು ದನಗಳೂ ದನ ಕಾಯುವವರೂ ಮರದ ನೆರಳಿನಲ್ಲಿ ನಿದ್ದೆ ಜೊಂಪಿನಲ್ಲಿ ವಿರಾಮ ತೆಗೆದುಕೊಳ್ಳುತ್ತಿರಬೇಕಾದರೆ ಹಠಾತ್ತಾಗಿ ಧಾಳಿ ಮಾಡುತ್ತಿತ್ತು. ಮೊದಮೊದಲು ದನಕರುಗಳ ಗಲಭೆಯಿಂದ ಎಚ್ಚತ್ತ ದನಗಾಹಿಗಳು ಗಲಾಟೆ ಮಾಡಿ ಕಲ್ಲುಗಳನ್ನು ಹುಲಿಯತ್ತ ಎಸೆದು ಅದನ್ನು ಹಿಮ್ಮೆಟ್ಟಿಸಲು ಪ್ರಯತ್ನಿಸುತ್ತಿದ್ದರು. ಆದರೆ ಹುಲಿ ಒಮ್ಮೆ ಹಾಗೆ ಮಾಡಿದ ದನ ಕಾಯುವವನ ಮೇಲೆ ಹಾರಿ ಮುಂಗಾಲುಗಳಿಂದ ಒಂದು ಏಟು ಕೊಟ್ಟಿತು. ಕೆನ್ನೆಯೆಲ್ಲಾ ಹಿಸಿದುಹೋದ ಅವನು ಹೇಗೋ ಬದುಕಿಕೊಂಡ. ಆದರೆ ಅವತ್ತಿನಿಂದ ಹುಲಿ ಬೆದರಿಸಲು ಹಳ್ಳಿಗರು ಮಾಡುತ್ತಿದ್ದ ಪ್ರಯತ್ನವೆಲ್ಲಾ ಬಂದಾಯ್ತು.

ಬೆಳ್ಳಂದೂರಿನ ಪರಿಸ್ಥಿತಿ ದಿನದಿಂದ ದಿನಕ್ಕೆ ಭಯಾನಕವಾಗುತ್ತಾ ಬಂತು. ಯಾರಿಗೂ ಮೇಯಲು ಹೋದ ದನಗಳು ಹಿಂದಿರುಗಿ ಬಂದಾವೆಂದು ನಂಬಿಕೆಯೇ ಇರುತ್ತಿರಲಿಲ್ಲ.

ಆದರೆ ಕಟ್ಟಿಹಾಕಿ ಕೊಟ್ಟಿಗೆಯಲ್ಲೇ ಹುಲ್ಲು ನೀರು ಕೊಟ್ಟುಕೊಂಡು ಎಷ್ಟು ದಿನ ತಾನೆ ದನಗಳನ್ನು ಸಾಕಲು ಅವರಿಗೆ ಸಾಧ್ಯ? ಬೆಳ್ಳಂದೂರಿನಲ್ಲಿ ದನಗಳು ಸುಲಭವಾಗಿ ದೊರೆಯದಿದ್ದಾಗ ಆ ಹುಲಿ ಚೋರ್ಡಿ, ತ್ಯಾಗರ್ಥಿವರೆಗೂ ತನ್ನ ಕಾರ್ಯಕ್ಷೇತ್ರ ವಿಸ್ತರಿಸಿತು. ಅದರ ಕೀರ್ತಿ ಎಲ್ಲಾ ಕಡೆಗೂ ಹಬ್ಬಿತು. ಆದರೆ ಅವರೆಗೂ ಅದು ದನಗಳ್ಳನೆಂದು ಖ್ಯಾತವಾಗಿತ್ತೇ ಹೊರತು ನರಭಕ್ಷಕನೆಂದಲ್ಲ.

ಹೀಗಾಗಿ ಈ ಸಮಾಚಾರ ಮಿಸ್ಟರ್ ಜಾನ್ಸನ್ ಎಂಬ ಯೂರೋಪಿಯನ್ ಆಫೀಸರನ ಕಿವಿಗೂ ಬಿತ್ತು. ಜಾನ್ಸನ್ ಸರ್ಕಾರದ ರೈಲ್ವೆ ಅಧಿಕಾರಿ. ಭಾರತದ ಬೇರೆಲ್ಲೋ, ಕಾಡುಗಳಾಗಲಿ ಹುಲಿಗಳಾಗಲೀ ಇಲ್ಲದ ಜಾಗದಲ್ಲಿ ಕೆಲಸ ಮಾಡಿಕೊಂಡಿದ್ದವನು. ಈತನ ಬಳಿ ಒಂದು ರೈಫಲ್ ಇತ್ತು. ಮೈಸೂರು ಸಂಸ್ಥಾನಕ್ಕೆ ವರ್ಗವಾಗಿ ಬಂದ ಇವನು ಬೆಳ್ಳಂದೂರಿನಲ್ಲಿ ದನಗಳಿಗೆ ಪಿಡುಗಾಗಿದ್ದ ಈ

ಹುಲಿಯನ್ನು ಹೊಡೆಯಬೇಕೆಂದು ತೀರ್ಮಾನಿಸಿ ರೈಲು ರಸ್ತೆಯಿಂದ ಕೇವಲ ಏಳು ಮೈಲಿ ದೂರದಲ್ಲಿದ್ದ ಬೆಳ್ಳಂದೂರಿಗೆ ಬಂದ. ತನ್ನ ರಜ ಮುಗಿಯುವುದರೊಳಗೆ ಆ ಹುಲಿ ಹೊಡೆದು, ಅದರ ಚರ್ಮ ಹದ ಹಾಕಿಸಿ ಒಯ್ಯಬೇಕೆಂದು ಉದ್ದೇಶಿಸಿದ್ದ.

ಈ ಕಥೆ ಇನ್ನೂ ಮೂರು ಭಾಗಗಳಲ್ಲಿ ತುಂಬಾ ಕುತೂಹಲದಿಂದ ಮುಂದುವರೆಯುತ್ತದೆ. ಪೂರ್ತಿ ಕಥೆಯನ್ನು **ಬೆಳ್ಳಂದೂರಿನ ನರಭಕ್ಷಕ** ಪುಸ್ತಕದಿಂದ ಓದಿ ಆನಂದಿಸು.

**ಆಕರ: ಬೆಳ್ಳಂದೂರಿನ ನರಭಕ್ಷಕ**
**ಪ್ರಕಾಶನ: ಪುಸ್ತಕ ಪ್ರಕಾಶನ**
**ಮೊ: ೯೪೪೮೨೦೩೭೩೦**

**ಮನ ಮಂಥನ:**

* ನಿಮ್ಮ ಊರಿಗೆ ಹುಲಿ ಕಾಟ ಕೊಡುತ್ತಿದ್ದರೆ ನೀನು ಹೇಗೆ ರಕ್ಷಣೆ ಮಾಡುತ್ತಿದ್ದೆ ಎನ್ನುವುದನ್ನು ಕಲ್ಪಿಸಿಕೊಂಡು ಒಂದು ಕಥೆ ಕಟ್ಟಿ ಸ್ನೇಹಿತರೊಂದಿಗೆ ಹಂಚಿಕೊ.

ಕಥೆ

# ಕಳ್ಳರ ಗುರು

– ಡಾ. ಬೆಟಗೇರಿ ಕೃಷ್ಣಶರ್ಮ

‘‘ಒಂದುವಾರ ಮುಳುಗಿದು ಹೋಯಿತು.. ಮನೆಯೆಲ್ಲ ಸೂರೆಹೋಗಿ! ಮನೆಯಲ್ಲಿ ಒಂದು ಕಾಸೂ–ಒಂದು ಕಾಳೂ–ಉಳಿಯದಂತೆ, ಇದ್ದುದೆಲ್ಲವನ್ನೂ ಕಳ್ಳರು ದೋಚಿಕೊಂಡು ಹೋದರು! ಈ ಊರ ಹೊರಗಿನ ಮನೆ ಬೇಡವೆಂದು ನಾನು ಸಾರಿ ಸಾರಿ ಹೇಳಿದೆ; ನೀವೇನೂ ಕೇಳಲಿಲ್ಲ.’’

“ಹೋಗಲಿ ಬಿಡು ರತ್ನಾ! ನಮ್ಮಲ್ಲಿ ಅವು ಇಲ್ಲದೆ ಇದ್ದರೆ, ಅವರು ಒಯ್ಯುತ್ತಿದ್ದರು ಹೇಗೆ? ಹಣ, ಹೊನ್ನು– ಇವುಗಳ ಸಂಗ್ರಹ ಬೇಡವೆಂದರೆ ನೀನು ಕೇಳುವುದಿಲ್ಲ. ನಮ್ಮ ಈ ವೈದ್ಯಕವೃತ್ತಿ ದುಡ್ಡು ಗಳಿಸಬೇಕಾದುದಲ್ಲ; ಕೇವಲ ಸಮಾಜದ ಕ್ಷೇಮಸಾಧನೆಗಾಗಿ ಇರುವುದು. ಸಮಾಜದಿಂದ ನಮಗೆ ಬದುಕಿ ಇರುವ ಮಟ್ಟಿಗೆ ಏನಾದರೂ ದೊರೆತರೆ ಸಾಕು!”

‘‘ಏನು ದೊರೆಯುವುದು ಸಮಾಜದಿಂದ? ಕಳವಾದ ದಿನದಿಂದಲೂ ಒಂದು ಕಾಸಿನ ಪ್ರಾಪ್ತಿಯಿಲ್ಲ. ತವರು ಮನೆಯಿಂದ ತಂದ ನನ್ನ ಚಿನ್ನದ ಒಡವೆಗಳೂ ಹೋದುವು. ಎಲ್ಲವೂ ಕಳೆದುಹೋಯಿತು! ಇನ್ನು ಬದುಕುವ ಬಗೆ ಹೇಗೆ?”

“ಎಲ್ಲವೂ ಎಲ್ಲಿ ಹೋಗಿದೆ ರತ್ನಾ? ಔಷಧಿಯ ಕುಪ್ಪಿಗಳಿಗೆ ಕಳ್ಳರು ಕೈ ಹಚ್ಚಿಲ್ಲ; ನನ್ನ ವೈದ್ಯಕಪ್ರಾವೀಣ್ಯವನ್ನಂತೂ ಯಾರೂ ಕದ್ದೊಯ್ಯಲಾರರು!”

"ಏನು ಪ್ರಾವೀಣ್ಯವೋ ಏನೋ! ನಾಳೆಯ ಮಧ್ಯಾಹ್ನದ ಊಟಕ್ಕೆ ತತ್ವಾರ ಬಂದು ಕುಳಿತಿದೆ!"

"ಢಣ್... ಢಣ್...ಢಣ್!" ದೂರದ ಗಡಿಯಾರದಲ್ಲಿ, ರಾತ್ರಿಯ ಹತ್ತು ಗಂಟೆ ಬಾರಿಸಿದುದು ಕೇಳಿಸಿತು. ವೈದ್ಯರ ಮನೆಯ ಮುಂಬಾಗಿಲು ಇಕ್ಕಿದ್ದಿತು. ಕಿರುಮನೆಯಲ್ಲಿ ಕುಳಿತುಕೊಂಡು ವೈದ್ಯರು, ವೈದ್ಯರ ಹೆಂಡತಿ– ಮಾತನಾಡುತ್ತಿದ್ದರು. ಮೊಗಸಾಲೆಯಲ್ಲಿ ಮಲಗಿದ ಚಿದಂಬರಮಾವ, ಗಾಢನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದರು.

ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ; ದಟ್ಟವಾದ ಕತ್ತಲೆ ವೈದ್ಯರ ಕುಟೀರವನ್ನು ಮುತ್ತಿನಿಂತಿದೆ. ಊರ ಕಡೆಯಿಂದ ನಾಯಿಗಳ ಬೊಗಳಾಟ ಕೇಳುತ್ತಲಿದೆ. ಕುಟೀರದ ಸುತ್ತಮುತ್ತಲಿನ ಮರಗಳ ಮೇಲೆ ಇರುಳು ಹಕ್ಕಿಗಳ ಹಾರಾಟ, ಕಿರುಚಾಟ ಆಗಾಗ ನಡೆದು, ವಾತಾವರಣದ ನಿಶ್ಯಬ್ದತೆಯನ್ನು ಕೆಡಿಸುತ್ತಲಿವೆ.

ಇದ್ದುದಿದ್ದಂತೆ ವೈದ್ಯರ ಕಿವಿಗೆ ಹೊರಗಿನಿಂದ ಕೂಗು ಕೇಳಿಸಿತು:

"ಸ್ವಾಮಿಯವರೇ... ವೈದ್ಯರೇ!"

ವೈದ್ಯರು ತಟ್ಟನೆ ಎದ್ದು ಬಂದು ಮುಂಬಾಗಿಲನ್ನು ತೆರೆದರು. ಗೊರವೆ ಕಟ್ಟಿಗೆಯ ಪಂಜನ್ನು ಕೈಯಲ್ಲಿ ಹಿಡಿದುಕೊಂಡು ನಿಂತ ಇಬ್ಬರು ಮನುಷ್ಯರನ್ನು ಅವರು ನೋಡಿದರು. ಇಬ್ಬರಿಗೂ ಕಪ್ಪಗಿನ ದಪ್ಪನೆಯ ದೇಹ; ತಲೆಯ ಮೇಲೆ ಅಸ್ತವ್ಯಸ್ತವಾದ ಕೂದಲ ಬೆಳೆಯಿದೆ. ಗಿಡ್ಡ ಚೆಣ್ಣವನ್ನು ತೊಟ್ಟಿದ್ದಾರೆ. ಮೈಮೇಲೆ ಕರಿಯ ಕಂಬಳಿ ಹೊದ್ದುಕೊಂಡಿದ್ದಾರೆ. ವೈದ್ಯರು ಅರೆನಿಮಿಷ ನಿಟ್ಟಿಸಿ ನೋಡಿ ಹೇಳಿದರು:

"ಇಂದು ನಿಮಗೆ ಏನೂ ಸಿಗುವಂತಿಲ್ಲ! ಒಂದು ವಾರದ ಹಿಂದೆಯೇ ಕಳವಾಗಿ, ಎಲ್ಲವೂ ಬರಿಮನೆಯಾಗಿದೆ. ಒಂದು ಹಿಡಿ ಕಾಳು ಕೂಡ ಮನೆಯಲ್ಲಿ ಇಲ್ಲ!" ಬಂದವರಲ್ಲಿ ಒಬ್ಬನೆಂದ:

"ನಾವು ಕಳವಿಗೆ ಬಂದವರಲ್ಲ ಸ್ವಾಮಿ! ಮದ್ದಿಗಾಗಿ ಬಂದಿದ್ದೇವೆ!"

"ಮದ್ದಿಗಾಗಿಯೆ? ಯಾರಿಗಾಗಿ ಮದ್ದು." ವೈದ್ಯರು ಕೇಳಿದರು.

"ನಮ್ಮ ಯಜಮಾನರ ಮಗನಿಗೆ ಬುದ್ದಿ! ಒಬ್ಬನೇ ಒಬ್ಬ ಮಗ ಅವರಿಗೆ. ಈಗ ಐದಾರು ದಿನಗಳಿಂದ ಉರಿಬಂದು ಮಲಗಿದ್ದಾನೆ. ಇಂದಂತೂ ಬಹಳ ಸಂಕಟ ಅವನಿಗೆ. ಹೇಗಾದರೂ ಮಾಡಿ ತಮ್ಮನ್ನು ಕರೆದುಕೊಂಡು ಬರಬೇಕೆಂದು ನಮ್ಮ ಯಜಮಾನರು – ಹೇಳಿದರು. ಅದಕ್ಕಾಗಿಯೇ ಈಗ ಓಡುತ್ತ ಇಲ್ಲಿಗೆ ಬಂದಿದ್ದೇವೆ. ತಾವು ಬರಬೇಕು ಬುದ್ದಿ!" ಬಂದವರಲ್ಲಿ ಒಬ್ಬ ಮೊರೆಯ ಧ್ವನಿಯಲ್ಲಿ ಹೇಳಿದ:

"ಯಾರು ನಿಮ್ಮ ಯಜಮಾನ?"

"ಬೇಡರ ಹಳ್ಳಿಯ ಭೀಮನಾಯಕ ಬುದ್ದಿ!"

ಬೆರಗಿನ ಧ್ವನಿಯಲ್ಲಿ ವೈದ್ಯರು ಕೇಳಿದರು:

‘‘ಆ ಕಳ್ಳರ ಹಿರಿಯ ಭೀಮನಾಯಕನೆ?”

ತಡವರಿಸುವ ಧ್ವನಿಯಲ್ಲಿ ಒಬ್ಬ ನುಡಿದ;

“ಹೌದು, ಬುದ್ದಿ! ಆತ... ಕಳ್ಳರ ಹಿರಿಯ... ಅಹದು! ಆದರೆ ತಾವು ಈಗ ಬರಲೇಬೇಕು ಬುದ್ದಿ! ಒಬ್ಬನೇ ಒಬ್ಬ ಮಗ ಅವನಿಗೆ ಬುದ್ದಿ! ಮಗನೆಂದರೆ ಆತನಿಗೆ ಜೀವ–ಪ್ರಾಣ ಬುದ್ದಿ!”

ವೈದ್ಯರು ಒಂದು ನಿಮಿಷ ನಿಂತು ಯೋಚಿಸಿದರು; ಆಮೇಲೆ ‘ಈಗ ಬಂದೆ, ಸ್ವಲ್ಪ ತಡೆಯಿರಿ’ ಎಂದು ಹೇಳಿ ಒಳಗೆ ಹೋದರು. ಬಾಗಿಲನ್ನು ಹಾಕಿಕೊಳ್ಳುವಂತೆ ಹೆಂಡತಿಗೆ ಹೇಳಿ ಹೊರಗೆ ಬಂದರು: ‘ಸರಿ! ಎಲ್ಲಿಗೆ ಹೋಗೋಣ? ನಡೆಯಿರಿ!’ ಎಂದು ನುಡಿದರು.

ಕತ್ತಲೆಯ ನಟ್ಟಿರುಳು. ಕಾಡಿನ ದಾರಿ.

ಯಮದೂತರಂತಹ ಆ ಬೇಡರು ಹಿಡಿದ ಪಂಜಿನ ಮಂಜುಬೆಳಕಿನಲ್ಲಿ ವೈದ್ಯರು ನಡೆದಿದ್ದರು. ದಾರಿಯ ಇಕ್ಕೆಡೆಗಳಲ್ಲೆಲ್ಲವೂ ಯಾವು-ಯಾವುವೋ ಪ್ರಾಣಿಗಳು ಸರಸರ ಸಪ್ಪುಳ ಮಾಡುತ್ತ ಸರಿದು ಹರಿದು ಹೋಗುತ್ತಿದ್ದವು. ಆಗ ವೈದ್ಯರ ಮನಸ್ಸಿನಲ್ಲಿ ಏನೇನೋ ಭಾವನೆಗಳು ಮೂಡುವುವು:

"ಇವರು ನನ್ನನ್ನು ಕರೆದು ಒಯ್ಯುವುದರಲ್ಲಿ ಮೋಸವೇನೊ ಇಲ್ಲವಷ್ಟೆ? ಬೇಡಬೇಡವೆಂದರೂ, ಪೊಲೀಸರು ನಮ್ಮ ಮನೆಯ ಕಳವನ್ನು ಶೋಧಿಸುವ ಕೆಲಸ ಕೈಕೊಂಡಿದ್ದಾರೆ. ನನ್ನ ಒಡವೆ ವಸ್ತುಗಳೊಂದಿಗೆ ನನ್ನನ್ನೂ ಇಲ್ಲದಂತೆ ಮಾಡಬೇಕೆಂದು ಇವರ ವಿಚಾರವಿದೆಯೋ ಏನೋ! ಹಾಗಾದರೆ ರತ್ನಳ ಗತಿಯೇನು?"

'ಓ, ನಾಗರಹಾವು!' ಎಂದು ಒಬ್ಬ ಕೂಗಿದಾಗ, ವೈದ್ಯರು ಎಚ್ಚರಗೊಂಡವರಾಗಿ ನೋಡಿದರು: ಎರಡು ಮೊಳ ಅಂತರದಲ್ಲಿಯೆ

ಒಂದು ನಾಗರಹಾವು– ಎರಡು ಮಾರು ಉದ್ದದ ತನ್ನ ದೇಹವನ್ನು ಸರಿಸುತ್ತ ಮುಂದುವರೆಯುತ್ತಲಿದೆ; ಮೂವರೂ ನಿಂತು ನೋಡಿದರು: ಹಾವು ತನ್ನ ಪಾಡಿಗೆ ತಾನು ಹರಿದುಹೋಯಿತು. ಮೂವರೂ ಮತ್ತೆ ಮುಂದೆ ಸಾಗಿದರು. ಮತ್ತೆ ವೈದ್ಯರ ತಲೆಯಲ್ಲಿ ಯೋಚನೆಯೆದ್ದಿತು:

"ಹಾವಿನಂತಹ ದುಷ್ಟಜಂತುವೂ ಕೆಣಕದೆ ಯಾರನ್ನೂ ಹಿಂಸಿಸದು. ಮನುಷ್ಯ? ಮನುಷ್ಯ ಸುಮ್ಮಗೆ ಬಿಡುವನೆ? ಅವನ ಆಶೆಯೆ ಹಾವು, ಯಾರೂ ಕೆಣಕದಿದ್ದರೂ– ಎಲ್ಲರನ್ನೂ ಕಡಿಯುವನು; ಕಳ್ಳನನ್ನು ಮೊದಲು ಮಾಡಿ ಸಾಮ್ರಾಟನವರೆಗೆ–ಎಲ್ಲರಿಗೂ ಆಶೆ! ಎಲ್ಲರಿಗೂ ಸ್ವಾರ್ಥಲೋಭ! ನಮ್ಮ ರತ್ನಳಿಗೆ ಏಕೆ ಇರಬಾರದು ತನ್ನ ಒಡವೆ–ವಸ್ತುಗಳ ಲೋಭ! ಅವಳೂ ಲೋಕದ ಮನುಷ್ಯರಲ್ಲಿ ಒಬ್ಬಳಲ್ಲವೇ?.. ಇನ್ನು ನನ್ನ ರತ್ನಗಳಿಗೆ ನಾನಾದರೂ ಮರಳಿ ದೊರೆಯುತ್ತೇನೋ

ಇಲ್ಲವ್ರೋ...”

ಕಾಡಿನ ಸೀಳುದಾರಿ ಮುಗಿದು, ಮೂವರೂ ಒಂದು ಕಿರುವಳ್ಳಿಯ ಬಳಿಗೆ ಬಂದರು. ನಾಯಿಗಳು ಬೊಗಳತೊಡಗಿದುವು. ವೈದ್ಯರ ಹೃದಯ ಡವಡವಿಸತೊಡಗಿತ್ತು. ನಡೆಯುವಾಗ ಅಡಿಗಳು ತೊದಲುತ್ತಿದ್ದವು. ಮೂವರೂ ಕೂಡಿ ಒಂದು ಮನೆಯ ಬಳಿಗೆ ಬಂದರು. ಇದ್ದದ್ದರಲ್ಲಿ ಅದೇ ದೊಡ್ಡಮನೆಯದು; ವೈದ್ಯರು ಮನೆಯೊಳಗೆ ಕಾಲಿರಿಸುವುದೇ ತಡ: ಭೀಕರಾಕೃತಿಯ ಮನುಷ್ಯನೊಬ್ಬ ಎದುರುಗೊಂಡು ಬಂದ; ವೈದ್ಯರ ಎದೆ ಜುಮ್ಮೆಂದಿತು, ಬಂದ ಮನುಷ್ಯ ವೈದ್ಯರ ಪಾದಗಳನ್ನು ಗಟ್ಟಿಯಾಗಿ ಹಿಡಿದು ಹೇಳಿದ:

“ಸ್ವಾಮೀ, ದೇವರು ಬಂದ ಹಾಗೆ ತಾವು ಬಂದಿರಿ; ದಯೆಯಿಟ್ಟು ನನ್ನ ಮಗನನ್ನು ನನಗೆ ಬದುಕಿಸಿಕೊಡಿರಿ!”

ವೈದ್ಯರು ಮೈದಡಹುತ್ತ. ಅವನನ್ನು ಮೇಲಕ್ಕೆತ್ತಿ ನೋಡಿದರು. ಆ ವಿಕಾರಮೂರ್ತಿಯ ಮುಖದ ಮೇಲೆ ನೆಲೆನಿಂತ ಕರುಣೆಯ ಸ್ವರೂಪವನ್ನು ಗುರುತಿಸಿದರು. ಹಾಗೆಯ ಅವನ ಕೈಹಿಡಿದುಕೊಂಡು, ಮಗುವು ಮಲಗಿದ್ದ ಕಿರುಮನೆಗೆ ಹೋದರು. ಮಿನುಗುವ ದೀಪದ ಮಂದಪ್ರಕಾಶದಲ್ಲಿ, ಹಾಸಿಗೆಯಲ್ಲಿ ಬಿದ್ದು ತಳಮಳಿಸುವ ಮಗುವನ್ನು ನೋಡಿದರು. ಪಕ್ಕದಲ್ಲಿಯೇ ಕುಳಿತ ಮಗುವಿನ ತಾಯಿ, ಬಿಕ್ಕಿ ಬಿಕ್ಕಿ ಅಳುತ್ತಲಿದ್ದಾಳೆ.

ಮಗುವಿನ ಬುಡದಲ್ಲಿ ಹಾಸಿದ್ದ ಹಾಸಿಗೆ ತಮ್ಮ ಮನೆಯದೆಂಬುದು ವೈದ್ಯರಿಗೆ ಗೊತ್ತಾಗಲಿಕ್ಕೆ ಬಹಳ ಕಾಲ ಬೇಕಾಗಲಿಲ್ಲ. ಮಗುವಿನ ಕಾಲ ಬಳಿಯಲ್ಲಿಯೇ ತಂದೆ ಬಂದು ಕುಳಿತ. ಹೆಂಡತಿಯ ಕಡೆಗೆ ಕಳವಳದ ನೋಟದಿಂದ ನೋಡುತ್ತ ಅವನೂ ಕಂಬನಿಗರೆಯತೊಡಗಿದ. ವೈದ್ಯರ ಮನಸ್ಸಿನಿಂದ ಹಾಸಿಗೆಯ ವಿಷಯ ಹಾರಿಹೋಯಿತು. ತಾವು

ಕಳ್ಳರ ಮನೆಯಲ್ಲಿ ಕುಳಿತಿರದೆ ತಾಯಿತಂದೆತನದ ಎರಡು ಕರುಣಾಹೃದಯಗಳೆದುರು ಕುಳಿತಿದ್ದೇವೆ ಎಂಬ ಭಾವನೆಗಳೆದ್ದು ಅವರ ಹೃದಯದಲ್ಲಿ ಜಾಗೃತವಾಯಿತು.

ವೈದ್ಯರು ಮಗುವಿನ ನಾಡಿಯನ್ನು ಹಿಡಿದು ನೋಡಿದರು. ಜ್ವರದ ರೀತಿಯನ್ನು ಪರೀಕ್ಷಿಸಿ ಗುರುತಿಸಿದರು. ಹೆದರಬೇಡಿರೆಂದು ತಾಯ್ತಂದೆಗಳಿಗೆ ಹೇಳಿ, ಔಷಧಿಯ ಮಾತ್ರೆಯನ್ನು ನೀರಲ್ಲಿ ಕದಡಿ ಮಗುವಿಗೆ ಕುಡಿಸಿದರು. ನಾಲ್ಕೈದು ನಿಮಿಷಗಳಲ್ಲಿಯೇ ಮಗುವು ಅರೆಗಣ್ಣುಮುಚ್ಚಿ ಮಲಗಿಕೊಂಡಿತು.

ವೈದ್ಯರಿಗೆ ಯಾವುದೋ ಸೊಪ್ಪು ಬೇಕಾಯಿತು. ಅದು ಬೇರೆಯವರಿಗೆ ಹೇಗೆ ಗೊತ್ತಾಗಬೇಕು? ಕತ್ತಲೆಯ ರಾತ್ರಿ ಬೇರೆ. ಪಂಜಿನವರೊಂದಿಗೆ ತಾವೇ ಕಾಡಿಗೆ ಹೋದರು. ಕಲ್ಲು ಎಡಹುತ್ತ, ಮುಳ್ಳುಗಳನ್ನು ತುಳಿಯುತ್ತ ಕಾಡಿನ ತುಂಬ ಅಡ್ಡಾಡಿದರು.;

ಬೇಕಾದ ಸೊಪ್ಪು ಕಣ್ಣಿಗೆ ಬಿದ್ದಾಗ, ಚಿಕ್ಕಮಕ್ಕಳಂತೆ ಕುಣಿದಾಡಿದರು. ಮರಳಿ ಮನೆಗೆ ಬಂದಾಗ, ಮನೆಯಲ್ಲಿ ಕರುಣಾಕ್ರಂದನ ನಡೆದಿತ್ತು. ಮಗುವಿನ ತಂದೆ–ತಾಯಿಗಳು ಕಾತರಭಾವದಿಂದ ಮಗುವಿನ ಕೈಕಾಲುಗಳನ್ನು ತಿಕ್ಕುತ್ತಿದ್ದರು. ವೈದ್ಯರು ಬಂದು ಮತ್ತೆ ನಾಡಿಯನ್ನು ನೋಡಿದರು. ತಾಯಿ–ತಂದೆಗಳಿಗೆ ಸಮಾಧಾನ ಹೇಳಿ, ತಾವು ತಂದ ಸೊಪ್ಪಿನ ರಸದೊಂದಿಗೆ ಮತ್ತೊಂದು ಸಲ ಔಷಧಿಯನ್ನು ಕುಡಿಸಿದರು. ಕುಪ್ಪಿಯಲ್ಲಿದ್ದ ಒಂದು ಲೇಪನವನ್ನು ಹಣೆಯತುಂಬ ಬಳಿದರು. ಮಗುವು ಮತ್ತೆ ಕಣ್ಣುಮುಚ್ಚಿ ಬಿದ್ದುಕೊಂಡಿತು.

ಮೂರು ನಾಲ್ಕು ನಿಮಿಷಗಳು ಮೌನದಲ್ಲಿ ಸಂದುವು. ಬಳಿಕ ವೈದ್ಯರು ಭೀಮನಾಯಕನನ್ನು ಕೇಳಿದರು:

“ನನ್ನನ್ನು ಕರೆಯುವಂತೆ ನಿನಗೆ ಯಾರು ಹೇಳಿದರು?”

"ಪಟ್ಟಣದಲ್ಲಿಯ ಯಾವ ಡಾಕ್ಟರರೂ ಇಲ್ಲಿಗೆ ಬರಲು ಒಪ್ಪಲಿಲ್ಲ! ಇಂತಹ ಮಗುವನ್ನು ಅಲ್ಲಿಗೇ ಒಯ್ಯುವುದು ಹೇಗೆ? ನಿಮ್ಮ ಮನೆಯ ತುಂಬ ಮದ್ದುಗಳಿದ್ದುದು ನನಗೆ ಗೊತ್ತಿತ್ತು. ಅದಕ್ಕಾಗಿ ನಿಮ್ಮನ್ನೇ ಕರೆದುಕೊಂಡು ಬರುವಂತೆ ನಮ್ಮ ಜನರಿಗೆ ಹೇಳಿದೆ."

ವೈದ್ಯರೆಂದರು: "ಒಳ್ಳೆಯದು ಮಾಡಿದಿ, ಇದೊಂದು ದಿನ ಹೋಗಿದ್ದರೆ ನಿಮ್ಮ ಮಗು ನಿಮಗೆ ದಕ್ಕುತ್ತಿದ್ದಿಲ್ಲ. ದೇವರು ನನಗೂ ಒಳ್ಳೆಯ ಬುದ್ಧಿಕೊಟ್ಟ; ನಾನು ಹೊರಟುಬಂದೆ. ಕಾಯುವುದು ದೇವರ ಕೆಲಸ ಭೀಮಣ್ಣಾ, ಕೊಲ್ಲುವುದು ರಾಕ್ಷಸರ ಕೆಲಸ! ಕಾಯುವ ಕೆಲಸಕ್ಕಾಗಿ ಮನಮುಟ್ಟಿ ದುಡಿಯುವವರಿಗೆ, ದೇವರ ಸಹಾಯ ಇದ್ದೇ ಇರುತ್ತದೆ."

"ಕಾಯುವುದು ದೇವರ ಕೆಲಸ... ಕೊಲ್ಲುವುದು ರಾಕ್ಷಸರ ಕೆಲಸ..." ಎಂಬೀ ಮಾತುಗಳು ಭೀಮನಾಯಕನ ಹೃದಯವನ್ನು ತಟ್ಟಿದುವು. ಆಗ ಅವನ ಮನದೊಳಗೊಂದು

ಭಾವನೆ ಮೊರೆದೆದ್ದಿತು: “ನಾನು ಕಾಯುವ ಕೆಲಸ ಎಂದು, ಯಾವುದನ್ನು, ಮಾಡಿದ್ದೇನೆ? ಇಲ್ಲವೇ ಇಲ್ಲವೆಂದ ಮೇಲೆ, ದೇವರು ನನಗೆ ಸಹಾಯ ಹೇಗೆ ಮಾಡುತ್ತಾನೆ?”

ಆಗಲೇ ಮಗು ಕಣ್ಣು ತೆರೆದು, ಮೆಲುದನಿಯಲ್ಲಿ ‘ಅಪ್ಪಾ!’ ಎಂದು ಕರೆಯಿತು. ತಾಯಿ–ತಂದೆಗಳಿಬ್ಬರೂ ಆತುರ–ಸಂಭ್ರಮಗಳಿಂದ ಮಗುವನ್ನು ನೋಡಿ ಮೈದಡಹಿದರು. ಮಗುವು ನಿಚ್ಚಳವಾಗಿ ಕಣ್ಣು ತೆರೆದಿತ್ತು. ಮಗುವಿನ ಮೈ ಬೆವರಿನಿಂದ ನೆನೆದಿತ್ತು. ತಾಯಿ ನಡುಗುವ ಧ್ವನಿಯಲ್ಲಿ ಹೇಳಿದಳು:

“ಮಗುವಿನ ಮೈಗೆಲ್ಲ ಬೆವರು ಬಂದಿದೆ!”

ವೈದ್ಯರು ಸಂತೃಪ್ತಭಾವದಲ್ಲಿ ಗದ್ಗದಿಸುತ್ತ ಹೇಳಿದರು:

“ದೇವರು ದಯಾಶಾಲಿ. ಆತ

ಕೆಡುಕನ್ನೆಂದಿಗೂ ಮಾಡನು!"

ಮತ್ತೊಂದು ಸಲ ಔಷಧಿಯನ್ನು ಕುಡಿಸುತ್ತಿರುವಾಗ ಬೆಳಗಿನ ಕೋಳಿ ಕೂಗಿತು. 'ತಾಯಿ, ಇನ್ನು ಮೇಲೆ ಇವನು ನಿನ್ನ ಮಗ! ಹೆದರುವ ಕಾರಣವೇನೂ ಉಳಿಯಲಿಲ್ಲ!' ಎಂದು ಹೇಳುತ್ತಿರುವಾಗ, ಆ ತಾಯಿ–ತಂದೆಗಳಿಬ್ಬರೂ, ವೈದ್ಯರನ್ನು ಕೃತಜ್ಞತೆಯ ದೃಷ್ಟಿಯಿಂದ ಮೀಯಿಸುತ್ತಿದ್ದರು. ಆಗ ವೈದ್ಯರು ಎದೆಯಲ್ಲಿ–ಭೀಕರಾಕಾರದ ಬೇಡರನ್ನು ಕಾಣದೆ. ಮನುಷ್ಯತ್ವದ ಮೂರ್ತಿಗಳನ್ನು ಕಾಣುತ್ತಿದ್ದರು.

ಬೆಳಗಾಗುತ್ತಲೇ ವೈದ್ಯರು ಮನೆಗೆ ಹೊರಟರು. ಆಗ ಭೀಮನಾಯಕ ವೈದ್ಯರ ಕಾಲಮೇಲೆ ಬಿದ್ದು ಹೇಳಿದ:

"ಆ ಕಾಣದ ದೇವರು ಇದ್ದಾನೋ ಇಲ್ಲವೊ! ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು! ನಿಮ್ಮ ಉಪಕಾರವನ್ನು ಎಂದಿಗೂ ಮರೆಯಲಾರೆ."

ಮರುದಿನ ಅಮಾವಾಸ್ಯೆಯ ತಮೋರಾತ್ರಿ ಹತ್ತುಗಂಟೆಯ ಸಮಯವಾಗಿದೆ. ವೈದ್ಯರ ಮನೆಯ ಮುಂಬಾಗಿಲು ಇನ್ನೂ ತೆರೆದೇ ಇದೆ. ಮೊಗಸಾಲೆಯಲ್ಲಿಯೇ ಗಂಡ–ಹೆಂಡತಿ ಮಾತನಾಡುತ್ತ ಕುಳಿತಿದ್ದಾರೆ. ಹೆಂಡತಿ ನುಡಿದಳು:

‘‘ನಿಮ್ಮ ವೈದ್ಯಪ್ರಾವೀಣ್ಯಕ್ಕೆ ದೊರೆಯುವ ಪ್ರತಿಫಲ ತಿಳಿದಂತಾಯಿತು; ಕಾಲ ತುಂಬ ನೆಟ್ಟ ಮುಳ್ಳು; ಎಡವಿದ ಗಾಯ: ನಿದ್ದೆಗೇಡು; ಉಪವಾಸ!’’

“ಇದೇನು ನಿನ್ನ ಮಾತು ರತ್ನಾ? ನನ್ನ ವೈದ್ಯಕದ ಪ್ರಾವೀಣ್ಯ, ಒಬ್ಬ ತಾಯಿಯ ಕರುಳನ್ನು ಸಂಶಯಿಸಿತು, ಒಬ್ಬ ತಂದೆಯ ಕುಲವನ್ನು ಮುಂದುವರೆಸಿತು. ಅದು ಹೋಗಲಿ ಬಿಡು; ಏಕೋ ಏನೋ ಇಂದು ಔಷಧಿಗಾಗಿ ಯಾರೂ ಬರಲಿಲ್ಲ. ಇಷ್ಟರಲ್ಲಿಯೇ ಬರಬೇಕಾಗಿತ್ತು...”

ವೈದ್ಯರು ಮಾತನಾಡುತ್ತಿರುವಾಗಲೇ ನಿನ್ನೆಯ ದಿನ ಕರೆಯಲು ಬಂದ ಬೇಡರಿಬ್ಬರೂ ತಲೆಯ ಮೇಲೆ ಗಂಟುಗಳನ್ನು ಹೊತ್ತುಕೊಂಡು ಒಳಗೆ ಬಂದರು. ಅವರ ಹಿಂದಿನಿಂದಲೇ ಭೀಮನಾಯಕನೂ ಒಳಗೆ ಬಂದ. ಬಂದವನೇ ವೈದ್ಯರಿಗೆ ನಮಸ್ಕಾರ ಮಾಡಿ ಹೇಳಿದ:

"ದೇವರ ಒಡವೆಗಳನ್ನು ದೇವರಿಗೆ ಒಪ್ಪಿಸಲು ಬಂದಿದ್ದೇನೆ. ನನ್ನನ್ನು ಕ್ಷಮಿಸಿ, ದಯೆಯಿಟ್ಟು ಎಲ್ಲವನ್ನೂ ಒಪ್ಪಿಸಿಕೊಳ್ಳಬೇಕು."

ಆಳುಗಳಿಬ್ಬರೂ, ಗಂಟುಗಳನ್ನು ಬಿಚ್ಚಿ ಮುಂದೆ ಇಟ್ಟರು. ವೈದ್ಯರ ಮನೆಯಲ್ಲಿ ಕಳವಾಗಿ ಹೋದ ಪದಾರ್ಥಗಳೆಲ್ಲ ಅವುಗಳಲ್ಲಿ ಇದ್ದುವು. ಭೀಮನಾಯಕ ಮತ್ತೆ ನುಡಿದ:

"ತಮ್ಮ ಹಾಸಿಗೆ ನನ್ನ ಮಗನ ಮಗ್ಗುಲಲ್ಲಿ ಇದೆ. ಅದೊಂದನ್ನು ಮಾತ್ರ ತಂದಿಲ್ಲ. ಅದು ತಮ್ಮ ಹರಕೆಯಾಗಿ ನನ್ನ ಮಗನಿಗೆಂದೇ ಇರಲಿ!"

ಆಗ ಗಂಡ ಹೆಂಡತಿ ಇಬ್ಬರೂ ಮಾತನಾಡಲೇ ಇಲ್ಲ. ಅರಳಿದ ಹೃದಯದಿಂದ ವೈದ್ಯರು ಹೆಂಡತಿಯನ್ನು ನೋಡುತ್ತಿದ್ದರು; ಹೆಂಡತಿ ಬೆರಗುಗಣ್ಣುಗಳಿಂದ ವೈದ್ಯರ ಕಡೆಗೊಮ್ಮೆ ಭೀಮನಾಯಕನ ಕಡೆಗೊಮ್ಮೆ ನೋಡುತ್ತಿದ್ದಳು. ಧನ್ಯತೆಯ ಮುಗುಳುನಗೆ ಆಕೆಯ ತುಟಿಯ ಮೇಲೆ ಲಾಸ್ಯವಾಡುತ್ತಿತ್ತು.*

**ಆಕರ: ಬೆಳುವಲದ ಬದುಕು**
**ಪ್ರಕಾಶನ: ಕರ್ನಾಟಕ ಸರ್ಕಾರ**
**ಡಾ. ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಟ್ರಸ್ಟ್,**
**ಬೆಳಗಾವಿ**

**ಮನ ಮಂಥನ:**

* ಮನುಷ್ಯನ ಸ್ವಭಾವ ಒಳ್ಳೆಯದೋ ಕೆಟ್ಟದೋ ಎಂಬ ಪ್ರಶ್ನೆಗೆ ಈ ಕಥೆ ಏನು ಉತ್ತರ ನೀಡುತ್ತದೆ?

* ಈ ಕಥೆಯಲ್ಲಿ ಭೀಮನಾಯಕನ ಜೀವನದಲ್ಲಿ ಬದಲಾವಣೆಗೆ ಕಾರಣವಾದ ಅಂಶವೇನು?

ಕಥೆ

The Precious Stone ಇಂಗ್ಲೀಷ್ ಕಥೆಯ ಕನ್ನಡ ಅನುವಾದ.




ಒಂದು ದಿನ ಒಬ್ಬ ಬಾಲಕ ತನ್ನ ತಂದೆಯನ್ನು ಕೇಳಿದ, "ಅಪ್ಪಾ, ನನ್ನ ಬೆಲೆ ಎಷ್ಟು ಇದ್ದಿರಬಹುದು?"

ಉತ್ತರ ಕೊಡುವ ಬದಲು ತಂದೆ ಹೇಳಿದ,"ಈ ಕಲ್ಲನ್ನು ತೆಗೆದುಕೊ. ಮಾರ್ಕೆಟ್ಟಿನಲ್ಲಿ ಇದನ್ನು ಮಾರು. ಯಾರಾದರೂ ಇದರ ಬೆಲೆ ಕೇಳಿದರೆ ನಿನ್ನ ಎರಡು ಕೈಬೆರಳು ತೋರಿಸು ಅಷ್ಟೇ. ಮತ್ತೇನೂ ಹೇಳಬೇಡ."

ಬಾಲಕ ಮಾರ್ಕೆಟ್ಟಿಗೆ ಹೋದ. ಅಲ್ಲೊಬ್ಬ ಹೆಣ್ಣುಮಗಳು,“ತಮ್ಮಾ, ಈ ಕಲ್ಲಿನ ಬೆಲೆ ಎಷ್ಟು? ನನ್ನ ಕೈತೋಟದಲ್ಲಿಡಲು ಇದು ಬೇಕಿದೆ” ಎಂದು ಕೇಳಿದಳು.

ಬಾಲಕ ಏನೂ ಹೇಳದೆ, ತನ್ನ ಎರಡು ಕೈಬೆರಳು ತೋರಿಸಿದ.

‘ಓ! 200 ರೂಪಾಯಿಗಳು. ಸರಿ, ನಾನು ತೆಗೆದುಕೊಳ್ಳುತ್ತೇನೆ” ಎಂದು ಹೇಳಿದಳು.

ಬಾಲಕ ಕಲ್ಲನ್ನು ಆಕೆಗೆ ಮಾರದೇ, ಮನೆಗೆ ಹೋಗಿ ತಂದೆಗೆ ಹೇಳಿದ,“ಅಪ್ಪಾ, ಒಬ್ಬ ಹೆಣ್ಣುಮಗಳು 200 ರೂಪಾಯಿಗಳಿಗೆ ಕಲ್ಲನ್ನು ತೆಗೆದುಕೊಳ್ಳುತ್ತೇನೆ ಅಂತಿದ್ದಾಳೆ. ಏನು ಮಾಡಲಿ?” ಎಂದು ಕೇಳಿದ.

ಆಗ ತಂದೆ,“ಮಗನೇ, ಈ ಕಲ್ಲನ್ನು ವಸ್ತುಸಂಗ್ರಹಾಲಯಕ್ಕೆ ತೆಗೆದುಕೊಂಡು ಹೋಗು. ಅಲ್ಲಿಯೂ ಈ ಕಲ್ಲನ್ನು

ತೆಗೆದುಕೊಳ್ಳಲು ಯಾರಾದರೂ ಬಂದರೆ ಏನೂ ಹೇಳಬೇಡ. ಎರಡು ಬೆರಳು ತೋರಿಸು ಅಷ್ಟೇ" ಎಂದು ಸಲಹೆ ನೀಡಿದ.

ಬಾಲಕ ವಸ್ತುಸಂಗ್ರಹಾಲಯಕ್ಕೆ ಹೋದ. ವಸ್ತುಸಂಗ್ರಹಾಲಯದ ಅಧಿಕಾರಿಯೊಬ್ಬನು ಕಲ್ಲನ್ನು ತೆಗೆದುಕೊಳ್ಳಲು ಆಸಕ್ತಿ ತೋರಿದ.

ಬಾಲಕ ಏನನ್ನೂ ಹೇಳದೇ, ಎರಡು ಬೆರಳು ತೋರಿಸಿದ.

ಅಧಿಕಾರಿ ಹೇಳಿದ,"ಆಯಿತು. ಇದು ಉತ್ತಮ ಕಲ್ಲು 2000 ರೂಪಾಯಿಗಳಿಗೆ ನಾನಿದನ್ನು ಕೊಳ್ಳುತ್ತೇನೆ. ನಮ್ಮ ವಸ್ತು ಸಂಗ್ರಹಾಲಯಕ್ಕೆ ಇದರಿಂದ ಶೋಭೆ ಬರುತ್ತದೆ."

ಬಾಲಕನಿಗೆ ಅಚ್ಚರಿ! ಮನೆಗೆ ಓಡಿ ಬಂದು,"ಅಪ್ಪಾ, ಅಪ್ಪಾ, ವಸ್ತುಸಂಗ್ರಹಾಲಯದ

ಅಧಿಕಾರಿಗಳು ಇದಕ್ಕೆ 2000 ರೂಪಾಯಿ ಕೊಡಲು ಬಂದರು' ಎಂದು ಅಚ್ಚರಿ ಉತ್ಸಾಹಗಳಿಂದ ಹೇಳಿದ.

ತಂದೆ ಅದೇ ಸಮಾಧಾನ ಚಿತ್ತನಾಗಿ ಹೇಳಿದ,"ಮಗು ನೀನೀಗ ಈ ಕಲ್ಲನ್ನು ಒಬ್ಬ ಹರಳಿನ ವ್ಯಾಪಾರಿ ಹತ್ತಿರ ತೆಗೆದುಕೊಂಡು ಹೋಗು. ಮಾಲಿಕನೆಗೆ ತೋರಿಸು. ಬೆಲೆ ಕೇಳಿದರೆ ಮತ್ತೇನೂ ಹೇಳಬೇಡ ಎರಡು ಬೆರಳು ತೋರಿಸು ಅಷ್ಟೇ." ಕೂಡಲೇ ಬಾಲಕ ಹರಳಿನ ವ್ಯಾಪಾರಿ ಬಳಿ ಓಡಿಹೋಗಿ, ಮಾಲಿಕನಿಗೆ ಕಲ್ಲನ್ನು ತೋರಿಸಿದ.

ಕಲ್ಲನ್ನು ನೋಡಿದ್ದೇ ತಡ ವ್ಯಾಪಾರಿಯ ಕಣ್ಣಲ್ಲಿ ಮಿಂಚು ಹೊಳೆಯಿತು. "ಈ ಕಲ್ಲು ನಿನಗೆ ಎಲ್ಲಿ ಸಿಕ್ಕಿತು? ಇದು ಇಡೀ ಜಗತ್ತಿನಲ್ಲೇ ತುಂಬ ಅಪರೂಪದ ಕಲ್ಲು. ಬೆಲೆಬಾಳುವ ಕಲ್ಲು. ನನಗಿದು ಬೇಕೆ ಬೇಕು. ಎಷ್ಟಕ್ಕೆ ಕೊಡತೀಯಾ?' ಎಂದು ಕೇಳಿದ.

ಬಾಲಕ ಎರಡು ಬೆರಳು ತೋರಿಸಿದ. ಮಾಲಿಕ ಹೇಳಿದ, 20,00,000 ರೂಪಾಯಿ ಕೊಡುತ್ತೇನೆ.'

ಬಾಲಕನಿಗೆ ಬಹಳ ವಿಚಿತ್ರ ಎನಿಸಿತು. ಏನು ಹೇಳಬೇಕು ಗೊತ್ತಾಗಲಿಲ್ಲ. ಮನೆಗೆ ಓಡಿಹೋಗಿ,"ಅಪ್ಪಾ, ಅಪ್ಪಾ, ಈ ಕಲ್ಲನ್ನು ಆ ಹರಳಿನ ವ್ಯಾಪಾರಿ 20,00,000 ರೂಪಾಯಿಗಳಿಗೆ ಕೊಳ್ಳಲು ತಯಾರಿದ್ದಾರೆ. ಏನು ಮಾಡಲಿ?" ಎಂದು ತಿಳಿಸಿದ.

ತಂದೆ ಸಮಾಧಾನ ಚಿತ್ತನಾಗಿಯೇ ಹೇಳಿದ,"ಸದ್ಯ ಏನೂ ಮಾಡಬೇಡ. ಅದು ಮೊದಲು ಎಲ್ಲಿ ಇದ್ದಿತೋ ಅಲ್ಲಿಯೇ ಇಡು. ನಾನು ಈಗ ಹೇಳುವುದನ್ನು ಗಮನವಿಟ್ಟು ಕೇಳಿಸಿಕೋ. . . . ಮಗು ಈಗ ನಿನಗೆ ಗೊತ್ತಾಯಿತಾ ನಿನ್ನ ಬೆಲೆ ಎಷ್ಟು? ಅಂತ... ನೋಡು, ನೀನು ಎಲ್ಲಿಂದ ಬಂದೆ ಎಂಬುದು ಮುಖ್ಯವಲ್ಲ; ಎಲ್ಲಿ ಹುಟ್ಟಿದೆ? ಎಂಬುದು

ಮುಖ್ಯವಲ್ಲ; ನಿನ್ನ ಚರ್ಮದ ಬಣ್ಣ ಯಾವುದು? ಎಂಬುದು ಮುಖ್ಯವಲ್ಲ; ಶ್ರೀಮಂತರ ಮನೆಯಲ್ಲಿ ಹುಟ್ಟಿದೆಯಾ? ಇಲ್ಲವೋ ಎಂಬುದೂ ಮುಖ್ಯವಲ್ಲ. ಮುಖ್ಯ ಏನು ಎಂದರೆ ನಿನ್ನನ್ನು ನೀನು ಎಲ್ಲಿ ಇರಿಸಬಯಸುತ್ತೀ. ನೀನು ಎಂಥವರೊಂದಿಗೆ ಇರಲು ಬಯಸುತ್ತೀ, ಹೇಗೆ ನಿನ್ನನ್ನು ನೀನು ಇರಿಸಿಕೊಳ್ಳಲು ಬಯಸುತ್ತೀ ಎಂಬುದು ಮುಖ್ಯ. ನಿನ್ನ ಜೀವದ ಬೆಲೆ 200 ರೂಪಾಯಿ ಎಂದು ಬೆಲೆಕಟ್ಟುವ ಜನರ ನಡುವೆ, ನಿನ್ನ ಬೆಲೆ 200 ರೂಪಾಯಿ ಎಂದು ಭಾವಿಸಿ ನಿನ್ನ ಇಡೀ ಬದುಕು ಕಳೆಯಬಹುದು. ಆದರೆ ಪ್ರತಿಯೊಬ್ಬರ ಒಳಗೆ ಒಂದು ವಜ್ರ ಇದ್ದೇ ಇರುತ್ತದೆ. ನಮ್ಮೊಳಗಿನ ವಜ್ರವನ್ನು ಕಾಣಬಲ್ಲ, ನಮ್ಮ ಬೆಲೆಯನ್ನು ಅರ್ಥ ಮಾಡಿಕೊಳ್ಳಬಲ್ಲ, ಜನರೊಂದಿಗೆ ನಾವು ಇರುವುದನ್ನೂ ಆಯ್ದುಕೊಳ್ಳಬಹುದು. ನಮ್ಮನ್ನು ಮಾರುಕಟ್ಟೆಯಲ್ಲಿ ಮಾರಿಕೊಳ್ಳಲೂಬಹುದು; ಅಥವಾ ವಜ್ರಗಳಾಗಿ ವಜ್ರಗಳೊಂದಿಗೆ ಸುಮ್ಮನೇ

ಇರಿಸಿಕೊಳ್ಳಲೂ ಬಹುದು. ಆಯ್ಕೆ ನಮ್ಮದು.

ಅದೇ ವೇಳೆ, ನೀನು ಸಹ ಬೇರೆಯವರ ಬೆಲೆಯನ್ನು, ಅವರಲ್ಲಿನ ವಜ್ರವನ್ನು ತಾವೇ ಕಾಣುವಂತೆ ಸಹಾಯ ಮಾಡಲು ಯತ್ನಿಸಬಹುದು. ನಿನ್ನ ಬದುಕಿನಲ್ಲಿ ಪರಿವರ್ತನೆ ತರಬಲ್ಲಂಥ ಜನರೊಂದಿಗೆ ಇರುವಂಥ ಬದುಕನ್ನು ಆಯ್ದುಕೊಳ್ಳಲು ನಿನ್ನ ವಿವೇಕವನ್ನು ಉಪಯೋಗಿಸು.

**ಕೃಪೆ: https://www.linkedin.com /pulse/precious-stone-inspirational -short-story-sokheng-khin**

**ಮನ ಮಂಥನ:**

* ಒಂದೇ ಕಲ್ಲಾದರೂ ಬೇರೆ ಬೇರೆ ಜಾಗದಲ್ಲಿ ಅದರ ಬೆಲೆ ಬದಲಾಗುತ್ತಿದ್ದಿದ್ದು ಯಾಕೆ? ಈ ವಿಚಾರ ನಮ್ಮ ಜೀವನಕ್ಕೆ ಹೇಗೆ ಅನ್ವಯಿಸುತ್ತದೆ?

Story

# The Precious[1] Stone



One day a young boy asked his father: what is the value[2] of my life?

Instead of answering, father told his son: take this rock and go sell it in the market, if anybody asked the

**ಹೊಸಪದಗಳು**

**1. Precious** (ಪ್ರೆಷಸ್) - **ಅಮೂಲ್ಯ**

**2. Value** (ವ್ಯಾಲ್ಯೂ) - **ಬೆಲೆ, ಮೌಲ್ಯ**

price, raise two fingers and don't say anything.

The boy then went to the market and a woman asked: How much is this rock[3] I want to put it in my garden? The boy didn't say anything and raised up two fingers, and the woman said: two dollars? I'll take it.

And the boy went home and told his father a woman wants to buy this rock for two dollars, the father then said: Son I want you to take this rock to a museum[4], if anybody wants to

**ಹೊಸಪದಗಳು**

**3. Rock** (ರಾಕ್) - ಕಲ್ಲು / ಶಿಲೆ

**4. Museum** (ಮ್ಯೂಸಿಯಂ) - ವಸ್ತು ಸಂಗ್ರಹಾಲಯ

buy it don't say a word and just raise two fingers.

The boy then went to the museum and a man wanted to buy his rock, the boy didn't say any word and just put up two fingers, and the man said: two hundred dollars?! I'll take it.

The boy was shocked[5] and went running home and told his father: a man wants to buy this rock for two hundred dollars!! his father then said: the last one I want you to take this rock to a precious stones store, show it to the owner and don't say a

**ಹೊಸಪದಗಳು**

**5. Shock** (ಷಾಕ್) - **ಆಘಾತ**

word, and if he asked the price just put up two fingers.

The son then went to a precious stones store, he showed the rock to the owner , where did you find this stone??! It is one of the most rare stones in the world, I must have it, How much would you sell it for? The boy raised two fingers, and the man said; I'll take it for two hundred thousand dollars.

The boy didn't know what to say an ran home to his father.

Father a man want to buy this stone for two hundred thousand dollars !!!

his father then said: Son, do you

know the value of your life now? You see, it doesn't matter where you come from, where you born, the color of your skin, or how much money you were born into. It matters where do you decide to place yourself, the people you surround yourself with, and how you choose to carry yourself.

You may spend your whole life thinking that you are a two dollars stone, you may spend your whole life surrounded by people that see your worth for only two dollars.

But everybody has a diamond inside him, and we can choose to surround ourselves with people that see our value and see the

diamond inside of us, we can choose to put ourselves in a market or in a precious stones store, and also you can choose to see the value of other people, you can help other people to see the diamond inside of them, choose the people you surround yourself wisely, and then you can make all the difference in your life.

**ಕೃಪೆ: https://www.linkedin.com /pulse/precious-stone-inspirational -short-story-sokheng-khin**

ಕವನ

ಕನ್ನಡ: 'ಹಚ್ಚೇವು ಕನ್ನಡ ದೀಪ' ಪದ್ಯಕ್ಕೆ ಪೂರಕ

# ಹೊತ್ತಿತೋ ಹೊತ್ತಿತು ಕನ್ನಡದ ದೀಪ

– ಡಾ.ಸಿದ್ದಯ್ಯ ಪುರಾಣಿಕ

ಹೊತ್ತಿತೋ ಹೊತ್ತಿತು ಕನ್ನಡದ ದೀಪ
ಮುಗಿಯಿತೋ ಮುಗಿಯಿತು ಶತಮಾನಗಳ ಶಾಪ..
ಹೊತ್ತಿತೋ ಹೊತ್ತಿತು ಕನ್ನಡದ ದೀಪ
ಹೊತ್ತಿತೋ.. ಹೊತ್ತಿತು ಕನ್ನಡದ ದೀಪ

ಕಣ್ಣು ಕುಕ್ಕಿಸುವಂತೆ ದೇದೀಪ್ಯಮಾನ
ಹರ್ಷ ಉಕ್ಕಿಸುವಂತೆ ಶೋಭಾಯಮಾನ..
ಕನ್ನಡದ ಮನೆಯಾಗೇ ಜ್ಯೋತಿರ್ನಿಧಾನ
ಕನ್ನಡದ ಪ್ರಾಣ.. ಕನ್ನಡದ ಮಾನ ..
ಹೊತ್ತಿತೋ ಹೊತ್ತಿತು ಕನ್ನಡದ ದೀಪ

ಉರಿವವರು ಬೇಕಿನ್ನು ಇದರೆಣ್ಣೆಯಾಗಿ
ಸುಡುವವರು ಬೇಕಿನ್ನು ನಿಡುಬತ್ತಿಯಾಗಿ..
ಧರಿಸುವವರು ಬೇಕಿನ್ನು ಸಿರಿಹಣತೆಯಾಗಿ
ನಮ್ಮೀ ಉಸಿರಾಗಿ ಧರ್ಮಕ್ಕೆ ಬಾಗಿ..
ಹೊತ್ತಿತೋ ಹೊತ್ತಿತು ಕನ್ನಡದ ದೀಪ

ಚಿರಕಾಲ ಬೆಳಗಲಿ ಕನ್ನಡದ ದೀಪ
ಜನಕೆಲ್ಲ ಬೆಳಕಾಗಿ ಪುಣ್ಯ ಪ್ರದೀಪ..
ಭಾರತಕೆ ಬಲವಾಗಿ ಭವ್ಯ ಪ್ರದೀಪ
ಕಳೆಯುತ್ತ ತಾಪ , ಬೆಳೆಸುತ್ತ ನೈಪ..
ಹೊತ್ತಿತೋ ಹೊತ್ತಿತು ಕನ್ನಡದ ದೀಪ

ಹೊತ್ತಿತೋ ಹೊತ್ತಿತು ಕನ್ನಡದ ದೀಪ
ಮುಗಿಯಿತೋ ಮುಗಿಯಿತು ಶತಮಾನಗಳ ಶಾಪ
ಹೊತ್ತಿತೋ.. ಹೊತ್ತಿತು.. ಕನ್ನಡದ ದೀಪ .

**‘ಹೊತ್ತಿತೋ ಹೊತ್ತಿತು ಕನ್ನಡದ ದೀಪ’ ಹಾಡನ್ನು ಕೇಳಲು ಇಲ್ಲಿರುವ QR ಕೋಡನ್ನು ಸ್ಕ್ಯಾನ್ ಮಾಡಿ ನೋಡು.**

**ಸಂಪರ್ಕ ಮಾಹಿತಿ:**

**ಧ್ವನಿ**
**ಶೈಕ್ಷಣಿಕ ಸಂಪನ್ಮೂಲ ಕೇಂದ್ರ**
**# 76, 'ಪುಷ್ಪಾಂಜಲಿ' 3ನೇ ಅಡ್ಡರಸ್ತೆ,**
**ಶಿವಗಿರಿ, ಧಾರವಾಡ 580 007**
**ಮೊ: 99866 61055**
**dhwanitrust@gmail.com,**
**www.dhwanitrust.org**

**ಗಮನಿಸಿ :** ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು,ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.